ಐಕ್ಯರಂಗ

ವಾರ ಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 29 ಜುಲೈ 15, 1984 ಬೆಲೆ 60 ಪೈಸೆ.

ದೇಶದ ಸಮಗ್ರತೆಗಾಗಿ ರಕ್ತ ಸುರಿಸಲೂ ನಮ್ಮ ಪಕ್ಷ ಸಿದ್ಧ

— ಕಾ॥ ಹರ್‌ಕಿಶನ್ ಸಿಂಗ್ ಸುರ್ಜಿತ್

ದೇಶದ ಸಮಗ್ರತೆಯನ್ನೂ ಐಕ್ಯತೆಯನ್ನೂ ಉಳಿಸಿಕೊಳ್ಳಲು, ಹಿಂದುಳಿದವರ, ಅಲ್ಪಮತಸ್ಥರನ್ನು ರಕ್ಷಿಸಲು ನಮ್ಮ ಪಕ್ಷ ರಕ್ತ ಸುರಿಸಲೂ ಸಿದ್ಧವಾಗಿದೆ- ಜೀವ ಕೊಡಲು ತಯಾರಿದೆ ಎಂದು ಘೋಷಿಸಿದವರು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪಾಲಿಟ್ ಬ್ಯುರೊ ಸದಸ್ಯರಾದ ಹರಕಿಶನ್ ಸಿಂಗ್ ಸೂರಜಿತ್. ಸಿ. ಪಿ. ಐ. (ಎಂ) ಬೆಂಗಳೂರು ಜಿಲ್ಲಾ ಸಮಿತಿ ಜುಲೈ 11 ರಂದು ಟಾನ್ ಹಾಲಿನಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಅವರು ಪಂಜಾಬ್ ಸಮಸ್ಯೆಯ ಕುರಿತು ಭಾಷಣ ಮಾಡುತ್ತಿದ್ದರು.

ಇಂದಿರಾ ಸರಕಾರದ ಅಸಮರ್ಪಕ ಆರ್ಥಿಕ ನೀತಿ, ಪ್ರತಿಯೊಂದು ಸಮಸ್ಯೆಯನ್ನೂ ತನ್ನ ಪಕ್ಷದ, ತನ್ನ ಅಧಿಕಾರದ ಸಲುವಾಗಿ ಉಪಯೋಗಿಸುವ ಧೋರಣೆಯಿಂದಾಗಿ ಜನರಲ್ಲಿ ಅತೃಪ್ತಿ ಬೆಳೆಯುತ್ತಿದೆ. ಈ ಅತೃಪ್ತಿಯನ್ನು ಸಾಮ್ರಾಜ್ಯ ಶಾಹಿಗಳೂ, ಛಿದ್ರಕಾರಿ ಶಕ್ತಿಗಳೂ ಉಪಯೋಗ ಮಾಡಿಕೊಂಡು, ಜನರಲ್ಲಿ ಜಾತೀಯ ಮತೀಯ ಭಾವನೆಗಳನ್ನು ಕೆರಳಿಸಿ, ಪ್ರತ್ಯೇಕತಾವಾದಕ್ಕೆ ಪುಷ್ಟಿ ಕೊಟ್ಟು ದೇಶವನ್ನು ತುಂಡು ಮಾಡುವ ಹವಣಿಕೆಯಲ್ಲಿದ್ದಾರೆ, ಸಾಮ್ರಾಜ್ಯ ಶಾಹಿ ಅಮೇರಿಕ ಸರಕಾರ, ಪಾಕಿಸ್ತಾನ ಮೊದಲಾದ ನೆರೆ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರ ಒದಗಿಸುತ್ತಿರುವುದರಿಂದ ವಿಭಜಕ ಶಕ್ತಿಗಳವು ಧೈರ್ಯದಿಂದ ಎದುರಿಸಬೇಕಾಗುವ ಈ ಸಂಧಿ ಕಾಲದಲ್ಲಿ ಇಂದಿರಾ ಗಾಂಧಿ ದೇಶವನ್ನು ಒಡೆಯಲು ಹೊಂಚು ಹಾಕಿರುವ ಸಾಮ್ರಾಜ್ಯ ಶಾಹಿಗಳ ಹೆಸರುಗಳನ್ನು ಬಯಲುಗೊಳಿಸಲು ನಿರಾಕರಿಸುತ್ತಿರುವುದು ಘೋರ ಅಪರಾಧವಾಗಿದೆ.

ದೇಶವು ಇಂದು ಅಪಾಯ ಪರಿಸ್ಥಿತಿಯಲ್ಲಿದೆ. ಸಾಮ್ರಾಜ್ಯಶಾಹಿ ಶಕ್ತಿಗಳು ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಧಕ್ಕೆ ಉಂಟುಮಾಡುತ್ತಿವೆ.

(8ನೇ ಪುಟ ನೋಡಿ)

ಪ್ರಜಾಪ್ರಭುತ್ವಕ್ಕೆ ಕೊಡಲಿಯೇಟು

ಕೇಂದ್ರ ಸರಕಾರ ತನ್ನ ಸಂವಿಧಾನ ವಿರೋಧಿ ಕ್ರಮಗಳಿಂದ ಫರೂಕ್ ಅಬ್ದುಲ್ಲಾ ಸರಕಾರವನ್ನು ಕಿತ್ತೊಗೆದು ಪಕ್ಷಾಂತರಿಗಳ ಸರಕಾರ ರಚಿಸಿರುವುದು ರಾಷ್ಟ್ರದ ಐಕ್ಯತೆಯನ್ನು ದುರ್ಬಲಗೊಳಿಸುವ ಕ್ರಮವಾಗಿದೆಂಬ ಆರೋಪ ಹೊರಿಸಿ, ಪ. ಬಂಗಾಲ, ಆಂಧ್ರ, ತ್ರಿಪುರ ಮತ್ತು ಕರ್ನಾಟಕದ ಮುಖ್ಯಮಂತ್ರಿಗಳು ದಿಲ್ಲಿಯಲ್ಲಿ ತಾ। 12 ರಂದು ಸೇರಿದ್ದ ರಾಷ್ಟ್ರೀಯ ಅಭಿವೃದ್ಧಿ ಕೌನ್ಸಿಲ್ ಸಭೆಗೆ ಬಹಿಷ್ಕಾರ ಹಾಕಿದರು.

ರಾಷ್ಟ್ರದ ಮೂಲಭೂತ ಪ್ರಶ್ನೆಗಳ ಕುರಿತು ಗಂಭೀರವಾಗಿ, ಫಲದಾಯಕವಾಗಿ ಚರ್ಚಿಸ ಬೇಕಾದರೆ ಎಲ್ಲರೊಳಗೆ ಆತ್ಮವಿಶ್ವಾಸ ಅತ್ಯಗತ್ಯ. ಆದರೆ ತನ್ನ ಪಕ್ಷದ ಸಂಕುಚಿತ ಹಿತದ ಸಲುವಾಗಿ ಫರೂಕ್ ಅಬ್ದುಲ್ಲಾ ಮಂತ್ರಿಮಂಡಲವನ್ನು ವಿಸರ್ಜಿಸಿರುವ ಗವರ್ನರರ ಕ್ರಮ ಎಲ್ಲ ನಿಯಮಗಳನ್ನು ಉಲ್ಲಂಘಿಸಿ ವಿಶ್ವಾಸಘಾತ ಮಾಡಿದೆಂಬ ಆರೋಪವನ್ನು ವಿರೋಧ ಪಕ್ಷಗಳ ಮುಖ್ಯಮಂತ್ರಿಗಳು ಮಾಡಿದ್ದಾರೆ. ಒಂದು ಸರಕಾರದ ಬಹುಮತವನ್ನು ಶಾಸನ ಸಭೆಯಲ್ಲೇ ನಿರ್ಧರಿಸಬೇಕೆಂಬ ಎಲ್ಲರಿಗೂ ಪ್ರಿಯವಾದ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ತತ್ವಕ್ಕೆ ಕೊಡಲಿ ಏಟು ಹಾಕಿರುವುದು, ಕೇಂದ್ರದಲ್ಲಿ ಆಡಳಿತೆ ನಡೆಸುತ್ತಿರುವವರ ಜನತಂತ್ರ ವಿರೋಧವಾದ, ಸರ್ವಾಧಿಕಾರಿ ಪ್ರವೃತ್ತಿಯನ್ನು ತೋರಿಸಿ ಕೊಡುತ್ತದೆಂದೂ, ಇಂಥ ಕ್ರಮದಿಂದಾಗಿ ಜಮ್ಮು-ಕಾಶ್ಮೀರದ ಜನತೆಯ ಪ್ರಜಾಪ್ರಭುತ್ವವಾದಿ ಅಭಿಪ್ರಾಯವನ್ನು ಅತ್ಯಂತ ಹೀನಾಯವಾಗಿ ಪರಿಗಣಿಸಿದಂತಾಗಿದೆಂದೂ ಹೇಳಿದ್ದಾರೆ. ಜನತೆಯಿಂದ ಆರಿಸಲ್ಪಟ್ಟ ಯಾವದೇ ಸರಕಾರವನ್ನು ಕಿತ್ತೊಗೆಯುವುದಿಲ್ಲೆಂಬ ಪ್ರಧಾನ ಮಂತ್ರಿಯವರ ಆಶ್ವಾಸನೆ, ಫರೂಕ್ ಮಂತ್ರಿ ಮಂಡಲವನ್ನು ಕಿತ್ತೊಗೆಯುವುದರಿಂದ ಸುಳ್ಳಾಗಿದೆಂದೂ, ಈ ಹಿಂದೆ ಹರಿಯಾಣ, ಮೇಘಾಲಯ ಮತ್ತು ಸಿಕ್ಕಿಂ ಸರಕಾರಗಳನ್ನು ಎಲ್ಲ ನೀತಿ, ನಿಯಮಗಳನ್ನು ಉಲ್ಲಂಘಿಸಿ ಕಿತ್ತೊಗೆದ ಕ್ರಮವನ್ನೇ ಮುಂದುವರಿಸಲಾಗುತ್ತಿದೆಂದೂ ವಿರೋಧ ಪಕ್ಷಗಳ ಮುಖ್ಯಮಂತ್ರಿಗಳು ತಮ್ಮ ಆತಂಕ ವ್ಯಕ್ತ ಮಾಡಿದ್ದಾರೆ.

ನಮ್ಮ ದೇಶದ ಶಾಸನಸಭೆಗಳ ಅಧ್ಯಕ್ಷರುಗಳ ಸಮ್ಮೇಳನ ಒಂದು ಮಂತ್ರಿ ಮಂಡಲದ ಬಹುಮತವನ್ನು ಶಾಸನ ಸಭೆಯಲ್ಲೇ ನಿರ್ಣಯಿಸಬೇಕೆಂದೂ, ಬಹುಮತ ಬೆಂಬಲವಿದ್ದ ಯಾವದೇ ಸರಕಾರವನ್ನು ಕಿತ್ತೊಗೆಯಬಾರದೆಂಬ ನಿರ್ಣಯದತ್ತ ರಾಷ್ಟ್ರಾಧ್ಯಕ್ಷ ಜೈಲ್ ಸಿಂಗ್ ಅವರ ಗಮನವನ್ನೂ ವಿರೋಧ ಪಕ್ಷಗಳ ಮುಖ್ಯಮಂತ್ರಿಗಳು ಎಳೆದಿದ್ದಾರೆ. ಕೇಂದ್ರ ಸರಕಾರದ ಜನತಂತ್ರ ವಿರೋಧಿ ಕ್ರಮದ ವಿರುದ್ಧ ಜನಾಭಿಪ್ರಾಯ ಮೂಡಿಸಿ ಹೋರಾಡಲು ಮುಂದಾಗೋಣ.

●

ಇಂದಿರಾ ಗಾಂಧಿಯ ಸರ್ವಾಧಿಕಾರಿ ಕ್ರಮಗಳನ್ನು ಸೋಲಿಸಿರಿ

ಭಾರತವು ಬಿಕ್ಕಟ್ಟನ್ನು ಹಾದು ಹೋಗುತ್ತಿದೆ. ವಿಚ್ಛಿದ್ರಕಾರಿ ಶಕ್ತಿಗಳ ಕೈಯಲ್ಲಿ ಒಂದಲ್ಲ ಒಂದು ಸವಾಲನ್ನು ಅದು ಎದುರಿಸುತ್ತಿದೆ. ಪ್ರತ್ಯೇಕತಾವಾದಿಗಳು ಮತೀಯವಾದಿಗಳು, ಜಾತೀಯವಾದಿಗಳು ಅಂಧ ಭಾಷಾ ಪ್ರೇಮಿಗಳು ಸಕ್ರಿಯವಾಗಿದ್ದಾರೆ. ಈ ಎಲ್ಲಾ ವಿಚ್ಛಿದ್ರಕಾರಿ ಶತ್ರುಗಳಿಗೆ ಬೆಂಬಲಿಸುತ್ತಾ ಸಾಮ್ರಾಜ್ಯಶಾಹಿಗಳು- ಅದರಲ್ಲೂ ಅಮೇರಿಕನ್ ಸಾಮ್ರಾಜ್ಯಶಾಹಿಗಳು - ಚಟುವಟಿಕೆ ನಡೆಸುತ್ತಿವೆ ಎಂಬುದು ಎಲ್ಲರಿಗೂ ತಿಳಿದ ವಿಷಯ.

ಅಲ್ಲದೇ ನಮ್ಮ ನೆರೆಹೊರೆಯ ಎಲ್ಲಾ ರಾಷ್ಟ್ರಗಳು-ವಿಶೇಷವಾಗಿ ಪಾಕಿಸ್ತಾನವು—ತೀವ್ರ ಶಸ್ತ್ರಸನ್ನದ್ಧವಾಗುತ್ತಿವೆ. ಯುದ್ಧದ ಭೀತಿಯನ್ನು ಅಲ್ಲಗಳೆಯುವಂತಿಲ್ಲ. ಈ ಪರಿಸ್ಥಿತಿಗಳಲ್ಲಿ ಎಲ್ಲಾ ರಾಷ್ಟ್ರೀಯ ಪಕ್ಷಗಳ ಜತೆಗೂಡಿ ಧೋರಣೆಗಳನ್ನು ರೂಪೀಕರಿಸುವುದರ ಬದಲು, ಇಂದಿರಾಗಾಂಧಿ ಎಲ್ಲಾ ಧೋರಣೆಗಳನ್ನು ಸ್ವಇಚ್ಛೆಗನುಸಾರವಾಗಿ ರೂಪಿಸಿ ಜಾರಿಗೊಳಿಸುತ್ತಿದ್ದಾರೆ. "ಏನಾದರೂ ತಪ್ಪಿ ಹೋದರೆ, ಪ್ರತಿಯೊಂದು ಹೆಜ್ಜೆಯಲ್ಲೂ ಅವರು ಎಲ್ಲಾ ತಪ್ಪನ್ನು ವಿರೋಧ ಪಕ್ಷಗಳ ಮೇಲೆ ಹೊರಿಸುತ್ತಿದ್ದಾರೆ."

ಪಂಜಾಬ್ ವಿಷಯದಲ್ಲಿ ಇಂದಿರಾಗಾಂಧಿಯು ವಿರೋಧ ಪಕ್ಷಗಳ ಅತ್ಯಂತ ಉತ್ತಮ ಮತ್ತು ನ್ಯಾಯವಾದ ಸಲಹೆಗೂ ಗಮನಕೊಡಲಿಲ್ಲ. ಅಕಾಲಿ ದಳದವರು ಕೂಡಾ, ಸ್ವಲ್ಪ ಮನಸ್ಸಿಲ್ಲದ ಮನಸ್ಸಿನಿಂದ ಈ ಸರ್ವಸಮ್ಮತ ಸಲಹೆಯನ್ನು ಒಪ್ಪಿದರು. ಆದರೆ ಇಂದಿರಾಗಾಂಧಿ ಅದನ್ನು ತಿರಸ್ಕರಿಸಿದರು.

ಪಂಜಾಬ್ ಸಮಸ್ಯೆಯನ್ನು ಅತಿ ದೂರಕ್ಕೆ ಒಯ್ಯಲಾಯಿತು. ಕೊನೆಗೆ ಇಂದಿರಾಗಾಂಧಿ ಬೇರೇನೂ ಉಪಾಯವಿಲ್ಲದ್ದರಿಂದ ಉಗ್ರವಾದಿಗಳನ್ನು ಸಿಖ್ ಮಹಾಗುರುದ್ವಾರದಿಂದ ಹೊರಗೆ ಹಾಕುವುದಕ್ಕಾ ಮಿಲಿಟರಿ ಕಾರ್ಯಾಚರಣೆಯನ್ನು ಮಾಡಲು ನಿರ್ಬಂಧಿತರಾದರು. ವಿರೋಧ ಪಕ್ಷಗಳ ಸೂಕ್ತ ಸಲಹೆಗೆ ಕಿವಿಕೊಡುತ್ತಿದ್ದರೆ, ಎಲ್ಲಾ ಸಿಖ್‌ರಿಗೆ ನೋವನ್ನುಂಟು ಮಾಡಿದ ಈ ಸನ್ನಿವೇಶವನ್ನು ತಪ್ಪಿಸಬಹುದಾಗಿತ್ತು.

ಈಗ ಇಂದಿರಾ ಗಾಂಧಿ ಡಾ. ಫರೂಕ್ ಅಬ್ದುಲ್ಲಾರವರ ಕಾಶ್ಮೀರ ಸರಕಾರವನ್ನು ವಜಾಮಾಡಿದ್ದಾರೆ. ಈ ಕ್ರಮದ ಮೂಲಕ "ನಾನು ನನಗೆ ಕಾಲು ಮುಟ್ಟಿ ಸಲಾಂ ಹೊಡೆಯದ ಯಾವುದೇ ರಾಜ್ಯ ಸರಕಾರವನ್ನು ಉಳಿಯಲು ಬಿಡುವುದಿಲ್ಲ" ವೆಂದು ಅವರು ಜಗಜ್ಜಾಹಿರ ಮಾಡಿದ್ದಾರೆ. ಈ ಕ್ರಮದ ಮೂಲಕ "ಯಾವುದೇ ರಾಜ್ಯದ ಮಂತ್ರಿಮಂಡಳಕ್ಕೆ ಬಹುಮತ ಇದೆಯೋ ಇಲ್ಲವೋ ಎಂಬುದರ ಪರೀಕ್ಷೆ ರಾಜ್ಯದ ವಿಧಾನ ಸಭೆಯಲ್ಲಿ ನಡೆಯ ಬೇಕು" ಎಂದು ಇತ್ತೀಚೆಗೆ ನವದೆಹಲಿಯಲ್ಲಿ "ಸಭಾಧ್ಯಕ್ಷರುಗಳ" ಸಭೆಯಲ್ಲಿ ಬಂದ ಒಮ್ಮತವನ್ನು ಇಂದಿರಾ ಗಾಂಧಿ ಉಲ್ಲಂಘಿಸಿದ್ದಾರೆ. ಡಾ. ಫರೂಕ್ ಅಬ್ದುಲ್ಲಾ ರವರ ಬಹುಮತವನ್ನು ಜಮ್ಮು—ಕಾಶ್ಮೀರ ವಿಧಾನ ಸಭೆಯಲ್ಲಿ ಪರೀಕ್ಷೆಗೆ ಗುರಿಪಡಿಸಬಹುದಿತ್ತು. ಬದಲಾಗಿ, ರಾಜ್ಯದಲ್ಲಿ ಅರಾಜಕತೆಯ ಪರಿಸ್ಥಿತಿಯನ್ನು ಉಂಟುಮಾಡಿ, ಆ ಶಕ್ತಿಗಳ ಮುಖಂಡರಾದ ಜಿ. ಎಂ. ಷಾರವರಿಗೇನೇ ಅಧಿಕಾರವನ್ನು ಕೊಡಲಾಯಿತು. ಅದೂ ವಿಧಾನ ಸಭೆಯಲ್ಲಿರುವ ಅವರ ಪಕ್ಷಾಂತರಿಗಳ ಅಲ್ಪಮತದ ಆಧಾರದಲ್ಲಿ.

ಜಮ್ಮು—ಕಾಶ್ಮೀರದ ರಾಜ್ಯಪಾಲರ ಈ ಕ್ರಮವು ಅತ್ಯಂತ ಆಶ್ಚರ್ಯಕರ ಮತ್ತು ಅತ್ಯಂತ ಸಂವಿಧಾನ ವಿರೋಧಿ ಕ್ರಮವಾಗಿದೆ. ಯಾವ ಆಧಾರದಲ್ಲಿ ಡಾ. ಫರೂಕ್ ರವರಿಗೆ ವಿಧಾನ ಸಭೆಯಲ್ಲಿ ಬಹುಮತವಿಲ್ಲ, ಜಿ. ಎಂ. ಷಾರವರಿಗೆ ಅವಶ್ಯಕ ಬಹುಮತವಿದೆ ಎಂದು ಈ ರಾಜ್ಯಪಾಲರು ಲೆಕ್ಕ ಹಾಕಿದರು? ಇದು ಕೇವಲ ಇಂದಿರಾಗಾಂಧಿಯಿಂದ ನಿರ್ದೇಶಿಸಲ್ಪಟ್ಟ ಕ್ರಮ, ಅವರ ಅತ್ಯಂತ ವಿಧೇಯ ರಾಜ್ಯಪಾಲ ಜಗಮೋಹನ್ ಇವರಿಂದ ಜಾರಿಗೊಳಿಸಲ್ಪಟ್ಟಿದೆ.

ಸ್ವಾಭಾವಿಕವಾಗಿ, ಅತ್ಯಂತ ಕಠಿಣ ಶಬ್ದಗಳಲ್ಲಿ ಎಲ್ಲಾ ರಾಷ್ಟ್ರೀಯ ಪಕ್ಷಗಳು ಜಮ್ಮು—ಕಾಶ್ಮೀರದ ರಾಜ್ಯಪಾಲರ ಈ ಕ್ರಮವನ್ನು ಖಂಡಿಸಿದ್ದಾರೆ, ಇದು ಇಂದಿರಾಗಾಂಧಿ ಮತ್ತವರ ಸಹೋದ್ಯೋಗಿಗಳ ಆಲೋಚನೆ ಹೇಗಿದೆ ಎಂಬುದಕ್ಕೆ ಸೂಚಕವಾಗಿದೆ. ಶ್ರೀಮಾನ್ ವೀರಪ್ಪಮೊಯಿಲಿಯವರು ಈ ಕೃತ್ಯವನ್ನು ಎರಡೂ ಕೈಗಳಿಂದ ಸ್ವಾಗತ ಮಾಡಿದುದರ ಅರ್ಥ ಅವರು ಇಂತಹ ಕ್ರಮವು ಕರ್ನಾಟಕದ ಸಂದರ್ಭದಲ್ಲೂ ನಡೆಯಲಿ ಎಂದಾಗಿದೆ.

(8ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

ಕರ್ನಾಟಕದಲ್ಲೂ 'ಷಾ' ಅವತಾರ ?

ನವೀನ ಪ್ರಕಾರೇಣ ಅಧಿಕಾರಕ್ಕೇರುವುದೇ ಮುಖ್ಯ ಗುರಿಯಾಗಿಟ್ಟುಕೊಂಡಿರುವ ಬಂಡವಾಳಶಾಹಿ ರಾಜಕೀಯ ಪಕ್ಷಗಳಲ್ಲಿ ಕಾಶ್ಮೀರದಂಥ "ಷಾ"ಗಳು ಹುಟ್ಟಿಕೊಳ್ಳುವುದು ಆಶ್ಚರ್ಯವೇನಲ್ಲ. ತನ್ನ ಪಾರ್ಟಿಗೆ, ಪಕ್ಷದ ಕಾರ್ಯಕ್ರಮಕ್ಕೆ ನಿಷ್ಠೆ ತನ್ನ ಹಾಗು ತನ್ನವರ ಸ್ವಹಿತಸಾಧನೆಗಳಷ್ಟೇ ಸೀಮಿತವಾಗಿರುವುದರಿಂದ ಅಧಿಕಾರ–ಹಣ–ಹೆಣ್ಣುಗಳಿಗೆ ಬಲಿಬೀಳುವ "ಷಾ"ಗಳಿಗೇನೂ ಕೊರತೆಯಿಲ್ಲ. ಪಕ್ಷಾಂತರವನ್ನು ನಿಷೇಧಿಸುವ ನಿರ್ಣಯ ಕೈಗೊಂಡಿರುವ ಏಕೈಕ ರಾಜ್ಯ ಜಮ್ಮು-ಕಾಶ್ಮೀರ. ಜಿ. ಎಂ. ಷಾ ಮತ್ತು ಅವನ ಜೊತೆ ಸೇರಿಕೊಂಡಿರುವವರೆಲ್ಲ ಪಕ್ಷಾಂತರ ನಿಷೇಧಿಸುವ ನಿರ್ಣಯಕ್ಕೆ ಮತ ನೀಡಿದವರಾಗಿದ್ದಾರೆ. 1979 ರಲ್ಲಿ ಆರ್. ಎಸ್. ಎಸ್. ಜನ ಸಂಘಗಳಂತೆಯೇ ಚರಣಸಿಂಗ್ ಅವರೂ ಜನತಾ ಸರಕಾರವನ್ನು ಉರುಳಿಸಲಿಕ್ಕೆ ಕಾರಣೀಭೂತರಾಗಿದ್ದರು. ತನ್ನ ಜೀವನದಲ್ಲೊಮ್ಮೆ ಪ್ರಧಾನ ಮಂತ್ರಿ ಪೀಠ ಅಲಂಕರಿಸಬೇಕೆಂಬ ಏಕೋದ್ದೇಶದಿಂದ ಇಡೀ ಭಾರತದ ಜನತೆಗೆ ಮೋಸ ಮಾಡಿ ಇಂದಿರಾ–ಸಂಜಯ ಬಲೆಯಲ್ಲಿ ಸಿಕ್ಕಿ ಬಿದ್ದಿದ್ದರು. ಕೆಲವೇ ತಿಂಗಳಲ್ಲಿ ಇಂದಿರಾ ಗಾಂಧಿ ಅಧಿಕಾರಕ್ಕೆ ಬರುವಂತೆ ಮಾಡಿದ್ದರು. ಅಂಥದ್ದೇ ಪಾತ್ರಧಾರಿಯಾಗಿದ್ದಾರೆ ಜಿ.ಎಂ.ಷಾ ಕಾಶ್ಮೀರದಲ್ಲಿ.

ಹೆಗಡೆ ಸರಕಾರದಲ್ಲೂ ಒಬ್ಬ "ಷಾ" ಹುಟ್ಟಿಕೊಂಡಿದ್ದಾನೆಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ನರಸಿಂಹ ಮೂರ್ತಿಯವರ ವಾದ. ಪಕ್ಷಾಂತರಕ್ಕೆ ಹೆಸರುವಾಸಿಯಾದ ಜನರೇ ಜನತಾ ಪಕ್ಷದಲ್ಲಿರುವುದರಿಂದ ಅಂಥವನೊಬ್ಬ ಹುಟ್ಟಿಕೊಳ್ಳಲಾರನೆಂದು ಹೇಳುವುದು ಕಷ್ಟ. ಆದರೆ ರಾಜ್ಯದ ಕಾಂಗ್ರೆಯಲ್ಲಿ ತುಂಬಿ ತುಳುಕುತ್ತಿರುವ ಗುಂಪುಗಾರಿಕೆ, ಅಧಿಕಾರಕ್ಕಾಗಿ ಆಮಿಷೆಗಳನ್ನೆಲ್ಲ ಕಣ್ಣಾರೆ ಕಾಣುತ್ತಿರುವ, ಈ ಹಿಂದೆ ಅದರ ಅನುಭವಗಳನ್ನುಂಡ ಜನತಾ ಶಾಸಕರು ಕಾಶ್ಮೀರ ಷಾನ ದಾರಿ ಹಿಡಿಯಲಿಕ್ಕಿಲ್ಲ. ಯಾಕೆಂದರೆ ಈ ಹಿಂದೆ ಪಕ್ಷ ಬಿಟ್ಟವರಿಗೆ ಕರ್ನಾಟಕದ ಮತದಾರರು ಕುಡಿಸಿದ ಕಹಿ ಕಷಾಯದ ಅನುಭವವನ್ನು "ಷಾ" ಪಾತ್ರಧಾರಿಗಳು ಮರೆತಿರಲಿಕ್ಕಿಲ್ಲ.

ಕಾಶ್ಮೀರದಲ್ಲಿ ಡಾ॥ ಫರೂಖ್ ಅಬ್ದುಲ್ಲಾ ಅವರ ಸರಕಾರ ಉರುಳಿಸಿದ ಇಂದಿರಾ ವಕ್ರದೃಷ್ಟಿ ಕರ್ನಾಟಕ–ತ್ರಿಪುರಾ ಕಡೆ ಬೀಳುವುದರಲ್ಲಿ ಸಂಶಯವಿಲ್ಲ. ಆ ಕಾರಣದಿಂದಲೇ ಈ ಹಿಂದೆ ದೇವರಾಜ ಅರಸುರವರ ಜೀವಸ್ಯ ಕಂಠಸ್ಯರಾಗಿದ್ದು ಅವರ ಪತನಕ್ಕೆ ಕಾರಣೀಭೂತರಾಗಿದ್ದ ಶ್ರೀಕಂಠಯ್ಯನವರು ದಿಲ್ಲಿಗೆ ಪ್ರಯಾಣಗೈದು ಅಮ್ಮಾವ್ರ ದರ್ಶನ ಪಡೆದರು. ಅಮ್ಮನ ಪಾದ ಗಟ್ಟಿಯಾಗಿಯೇ ಹಿಡಿಯಲು ಗುಂಡೂರಾಯರು ದಿಲ್ಲಿಗೆ ಒಂದೇ ಜಿಗಿತದ ತಯಾರಿಕೆಯಲ್ಲಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಮುಖ್ಯಮಂತ್ರಿ ಕುರ್ಚಿಯ ಮೇಲೆ ಗುರಿಯಿಟ್ಟುಕೊಂಡು ಬಂದಿದ್ದ ವೀರಪ್ಪ ಮೊಯಿಲಿಯವರು ಜನತಾ ಪಕ್ಷದವರಿಂದ ತಾನು ಹೊಡಿಸಿಕೊಂಡರೂ ತಮ್ಮಮ್ಮ ಕಣ್ಣೀರು ಸುರಿಸದಿರುವುದನ್ನು ಕಂಡು ನಿರಾಶರಾಗಿದ್ದಾರೆ.

ಶಾಸಕರನ್ನು ಕೊಂಡು ಕೊಂಡು ಜನತಾ ಸರಕಾರ ಉರುಳಿಸುವ ಬೂಟಾಸಿಂಗರ ಬೂಟಾಟಿಕೆ ಬೂದಿಯಾಗಿತ್ತು 1983 ರಲ್ಲಿ. ಪಕ್ಷಾಂತರಕ್ಕೆ ಜನರಿಂದ ಬರಬಹುದಾದ ಪ್ರತಿರೋಧದ ತೀಕ್ಷ್ಣತೆಯನ್ನರಿತಿರುವ ಜನತಾ ಶಾಸಕರು "ಷಾ" ಪಾತ್ರಧಾರಿಗಳಾಗುವ ಧೈರ್ಯವನ್ನು 1984 ರಲ್ಲಿ ಹೊಂದಲಿಕ್ಕಿಲ್ಲೆಂದು ನಮ್ಮ ಭಾವನೆ.

ಹೆಗಡೆ ಸಂಪುಟದಲ್ಲಿಯೇ "ಷಾ" ಇದ್ದಾನೆಂದು ನರಸಿಂಹಮೂರ್ತಿಯವರ ಆರೋಪ. ಕಂಸನನ್ನು ನರಸಿಂಹ ಕೊಂದು ಹಾಕಿದಂತೆ, ಜನತಾ ಮಂತ್ರಿಮಂಡಲದಲ್ಲಿ ಕಂಸ ಹುಟ್ಟಿಕೊಂಡರೆ ಕರ್ನಾಟಕದ ನರಸಿಂಹ ಅಂಥವರು ಅಧಿಕಾರ ಸ್ಥಾನ ಸ್ವೀಕರಿಸದಂತೆ ಅಡ್ಡಿಯೊಡ್ಡುತ್ತಾನೆಂಬ ವಿಶ್ವಾಸ ನಮಗಿದೆ. ಎಚ್ಚರಿಕೆ, "ಷಾ" ಹುಟ್ಟಿಕೊಂಡಾನು ? ಅವನ ಹೆಡಮುರಿಗೆ ಕಟ್ಟಲು ಸಿದ್ಧರಾಗಿರಿ.

ಸ್ಫೂರ್ತಿ ನೀಡದ ಸಮಾವೇಶಗಳು

ಇಂದಿರಾ ಆಳಿಕೆಯಲ್ಲಿ ಹದಗೆಡುತ್ತಿರುವ ದೇಶದ ರಾಜಕೀಯ, ಆರ್ಥಿಕ ಪರಿಸ್ಥಿತಿ, ಹಿಂದುಳಿದವರ ಮೇಲೆ ಸತತ ನಡೆಯುತ್ತಿರುವ ಅಮಾನುಷ ದಬ್ಬಾಳಿಕೆ, ಪಂಜಾಬಿನಲ್ಲಿ ತೀವ್ರವಾದಿಗಳ ಅಪಾಯಕಾರಿ ಚಟುವಟಿಕೆ, ಅವುಗಳಿಗೆ ಇಂದಿರಾ ಗಾಂಧಿಯ ನೇರ ಬೆಂಬಲ, ಸ್ವರ್ಣ ಮಂದಿರಕ್ಕೆ ಸೈನಿಕರ ಪ್ರವೇಶ, ಅಕಾಲಿಗಳ ಮೇಲೆ ಅದರಿಂದುಂಟಾದ ಪರಿಣಾಮ, ಭಿವಂಡಿ, ಮುಂಬಯಿಗಳಲ್ಲಿ ಬಾಳ ಠಾಕ್ರೆಯಂಥವರಿಂದುಂಟಾದ ಭೀಕರ ಜಾತೀಯ ಗಲಭೆಗಳು, ಅಸ್ಸಾಂನಲ್ಲಿ ಛಿದ್ರಕಾರಿ ಶಕ್ತಿಗಳ ಚಳುವಳಿ, ಕಾಶ್ಮೀರದಲ್ಲಿ ಡಾ॥ ಫರೂಖ್ ಅಬ್ದುಲ್ಲಾ ಅವರ ಸರಕಾರದ ಪತನ, ಇವುಗಳಿಂದಾಗಿ ದೇಶದ ರಾಜಕೀಯದ ಮೇಲಾಗಬಹುದಾದ ಅಪಾಯ, ಇಂಥ ಪರಿಸ್ಥಿತಿಯಲ್ಲಿ ಮುಂಬರುವ ಲೋಕಸಭೆ ಚುನಾವಣೆ ಈ ಹಿನ್ನೆಲೆಯಲ್ಲಿ ಅಖಿಲ ಭಾರತ ಮಟ್ಟದ ಎರಡು ರಾಜಕೀಯ ಪಕ್ಷಗಳ ಕಾರ್ಯಕಾರೀ ಸಮಿತಿ ಸಭೆ ಬೆಂಗಳೂರಿನಲ್ಲಿ ನಡೆಯಿತು. ಇಡೀ ದೇಶದ ಸಮಗ್ರತೆ, ಸಾರ್ವಭೌಮತವನ್ನು ನಾಶ ಮಾಡುವ, ಇಂದಿರಾ ಸರ್ವಾಧಿಕಾರತ್ವವನ್ನು ಸೋಲಿಸಲಿಕ್ಕೆ ದೇಶದ ಜನತೆಯಲ್ಲಿ ನವ ಚೈತನ್ಯ ತುಂಬುವ, ನಿರ್ದಿಷ್ಟ ಕಾರ್ಯಕ್ರಮ ರೂಪಿಸುವ, ಸಂಯುಕ್ತ ಹೋರಾಟಕ್ಕೆ ಚಳುವಳಿಗೆ ಮಾರ್ಗದರ್ಶನ ನೀಡುವ ನಿರ್ಣಯಗಳನ್ನು ಲೋಕದಳ, ವಾಗಲೀ ಜನತಾ ಪಕ್ಷವಾಗಲೀ ರೂಪಿಸದಿರುವುದು ದುರದೃಷ್ಟಕರ.

ಪಂಜಾಬ್–ಕಾಶ್ಮೀರದ ಘಟನೆಗಳು ಯಾವ ಪಕ್ಷವನ್ನಾದರೂ ಸಿಟ್ಟಿಗೇಳಿಸಲೇಬೇಕು, ಹೋರಾಟದಲ್ಲಿ ಧುಮುಕಲು ಕರೆ ಕೊಡಲೇ ಬೇಕು, ಆದರೆ ಇವೆರಡೂ ರಾಷ್ಟ್ರೀಯ ಪಕ್ಷಗಳ ಆಮೆ ವೇಗದ ಚಲನೆ ಕುಂಭಕರ್ಣ ನಿದ್ರೆಯನ್ನು ಕಂಡು ಇಂದಿರಾಗಾಂಧಿ ಒಳಗಿಂದೊಳಗೇ ನಗುತ್ತಿರಬೇಕು. ಸ್ವರ್ಣ ಮಂದಿರದಲ್ಲಿ ಸೈನ್ಯ ಪ್ರವೇಶಿಸಿದ ಕೂಡಲೇ ದೇಶದ್ಯಾಂತ ಒಂದುವಾರ ಪಂಜಾಬಿ ದಿನಾಚರಣೆಯನ್ನಾಚರಿಸಿ, ಪಂಜಾಬಿ ಘಟನೆಗಳ ಕುರಿತು ಪಾರ್ಟಿಯ ನಿಲುವನ್ನೂ, ಕೇಂದ್ರ ಸರಕಾರದ ತಪ್ಪು ಧೋರಣೆಗಳನ್ನೂ ಜನರ ಮಧ್ಯೆ ಒಯ್ಯಲು ನಿರ್ಧರಿಸಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ ಪಾರ್ಟಿ, ಸಿ. ಪಿ. ಐ. (ಎಂ) ಪಕ್ಷದ ಪ್ರಯತ್ನದಿಂದ ದಿಲ್ಲಿಯಲ್ಲಿ ಜುಲೈ 1 ರಂದು ವಿರೋಧ ಪಕ್ಷಗಳ ಸಮಾವೇಶವೂ ಸೇರುತ್ತದೆ. ಇಂದಿರಾ ಗಾಂಧಿಯನ್ನು ಸೋಲಿಸಿ ಪ್ರಜಾ ಪ್ರಭುತ್ವ ಉಳಿಸಬೇಕೆಂದು ಅಪೇಕ್ಷಿಸುವವರೆಲ್ಲ ತೀವ್ರ ಹೋರಾಟಕ್ಕೆ ಮುಂದಾಗುವ ಅಗತ್ಯವಿದೆ.

— ಎನ್ಕೆ

ನ್ಯಾಯಾಧೀಶರೂ ಅಭಿಪ್ರಾಯ ಸ್ವಾತಂತ್ರ್ಯವೂ

ನ್ಯಾಯಾಧೀಶರು ದೇಶದ ಸಮಸ್ಯೆಗಳ ಕುರಿತು ತಮ್ಮ ಅಭಿಪ್ರಾಯ ವ್ಯಕ್ತ ಮಾಡಬಹುದೇ ಎಂಬ ಸಮಸ್ಯೆಯ ಕುರಿತು ಕೆಲವರು ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ಗುಜರಾತ ಹೈಕೋರ್ಟಿನ ನ್ಯಾಯಾಧೀಶರಾದ ಸುಬ್ರಮಣ್ಯ ಪೋಟಿಯವರು "ಕೇಂದ್ರ–ರಾಜ್ಯ ಸಂಬಂಧ" ಮತ್ತು "ಭಾರತಕ್ಕೆ ಏಕರೂಪಕ ಕಾನೂನು" ಎಂಬ ವಿಷಯಗಳ ಕುರಿತು ಕೇರಳದಲ್ಲಿ ಮಾಡಿದ ಭಾಷಣವೇ ಅದಕ್ಕೆ ಕಾರಣ. ಕೇರಳದ ಮುಖ್ಯಮಂತ್ರಿಯನ್ನೊಳಗೊಂಡು ಎಲ್ಲ ಕಾಂಗ್ರೆಸ್ ಮುಖಂಡರೂ ಅಭಿಪ್ರಾಯ ವ್ಯಕ್ತ ಮಾಡುವ ಸ್ವಾತಂತ್ರ್ಯ ಕೆಲಸದ ಮೇಲಿರುವ ನ್ಯಾಯಾಧೀಶರಿಗೆ ಇಲ್ಲೆಂದು ವಾದಿಸಿದ್ದಾರೆ, ಅಷ್ಟೇ ಅಲ್ಲ ಪೋಟಿಯಂಥವರು ಸ್ವತಂತ್ರ ಅಭಿಪ್ರಾಯ ವ್ಯಕ್ತ ಮಾಡಲು ಇಚ್ಛಿಸಿದರೆ ಅವರು ರಾಜೀನಾಮೆ ಕೊಟ್ಟು ಹೊರಗೆ ಬರಲೆಂದು ಸಾರಿದ್ದಾರೆ.

ಮುಸ್ಲಿಂ ವ್ಯಕ್ತಿಗತ ಕಾನೂನಿನ ಕುರಿತು ಸಿ. ಪಿ. ಐ. (ಎಂ) ಕಾರ್ಯದರ್ಶಿ ಇ. ಎಂ. ಎಸ್. ನಂಬೂದಿರಿಪಾಡ ಹಾಗೆಯೇ ಪ್ರೊ॥ ಇರ್‌ಫಾನ್ ಹಬೀಬ ಅವರು ಯುವ ಜನ ಫೆಡರೇಶನಿನ ಅಖಿಲ ಭಾರತ ಸಮಾವೇಶದಲ್ಲಿ ಭಾಷಣ ಮಾಡುತ್ತ (ಕಲ್ಲಿಕೋಟೆ) ಮುಸ್ಲಿಂ ವ್ಯಕ್ತಿಗತ ಕಾನೂನನ್ನು ಬದಲಾವಣೆ ಮಾಡಿ ಏಕರೂಪಕ ಕಾನೂನು ಸಂಹಿತೆಯನ್ನು ಅನುಷ್ಠಾನದಲ್ಲಿ ತರುವುದರ ಅವಶ್ಯಕತೆಯನ್ನು ಒತ್ತಿ ಹೇಳಿದ್ದರು. ಯಾಕೆಂದರೆ ಮುಸ್ಲಿಂ ಮಹಿಳೆಯರು ಸಮಾಜದಲ್ಲಿ ಅತಿ ಹೆಚ್ಚಿನ ದಿಗ್ಬಂಧನಕ್ಕೊಳಗಾಗಿರುವರೆಂದೂ, ಪುರುಷರೆಲ್ಲಾ ನಾಲ್ಕು ಮಹಿಳೆಯರನ್ನು ಮದುವೆಯಾಗಬಹುದೆಂಬ ನಿಯಮ ಇರುವುದರಿಂದ ಹೆಣ್ಣು ಮಕ್ಕಳಿಗೆ ಸ್ವತಂತ್ರ ಅಸ್ತಿತ್ವ, ಭದ್ರತೆ ಇಲ್ಲದಂತಾಗಿದೆಂದೂ ಅಭಿಪ್ರಾಯ ವ್ಯಕ್ತ ಮಾಡಿದ್ದರು.

ಕಮ್ಯೂನಿಸ್ಟರು ಮುಸ್ಲಿಂ ವಿರೋಧಿ ಎಂಬ ಭೀಕರ ಪ್ರಚಾರ ಎಲ್ಲೆಡೆ ನಡೆಯಿತು. ಆದರೆ ಮುಸ್ಲಿಂ ಮಹಿಳೆಯರು ಮಾತ್ರ ಏಕರೂಪ ಕಾನೂನನ್ನು ಸ್ವಾಗತ ಮಾಡುವ ಬಯಕೆ ಹೊಂದಿದರು, ಯಾಕೆಂದರೆ ಹಾಗಾದರೆ ಮಾತ್ರ ತಮ್ಮ ಪುರುಷರ ಜೊತೆಯಲ್ಲಿ ಸರಿಸಮಾನ ಹಕ್ಕು ಸಿಗಲು ಸಾಧ್ಯವೆಂದು ಅವರಿಗೆ ಗೊತ್ತು.

ನ್ಯಾಯಾಧೀಶ ಸುಬ್ರಮಣ್ಯಂ ಪೋಟಿ ರಾಜೀನಾಮೆ ಕೊಡಬೇಕೆಂದು ಅವರು ಕಮ್ಯೂನಿಸ್ಟರ ಏಜಂಟರೆಂದೂ ಅವರು ರಾಜೀನಾಮೆ ಕೊಡದಿದ್ದರೆ ಇಂದಿರಾ ಗಾಂಧಿ ಅವರನ್ನು ಕಿತ್ತೊಗೆಯ ಬೇಕೆಂದೂ ಕೇರಳದ ಮುಖ್ಯಮಂತ್ರಿ ಬೊಬ್ಬಿಡುತ್ತಿರುವಾಗಲೇ ಕರ್ನಾಟಕ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಎ. ಎಸ್. ಮಳೀಮಠ ಅವರೂ ಏಕರೂಪ ಕಾನೂನು ಸಂಹಿತೆಯನ್ನು (ಸಿ. ಎಲ್. ಕೋಡ) ಅನುಷ್ಠಾನಕ್ಕೆ ತರುವುದು ರಾಷ್ಟ್ರೀಯ ಭಾವೈಕ್ಯ–ಅಖಂಡತೆಗಳ ಹಾಗೂ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಉಚಿತವಾಗಿದೆಂದು ಹೇಳಿದ್ದಾರೆ ಅಖಿಲ ಭಾರತ ಮುಸ್ಲಿಂ ಶೈಕ್ಷಣಿಕ ಸೊಸೈಟಿ ಏರ್ಪಡಿಸಿದ್ದ ಈದ ಮಿಲನ್ ಮತ್ತು ಭಾವೈಕ್ಯ ಸಮಾರಂಭದಲ್ಲಿ ಇಂಥ ಉದ್ಗಾರ ತೆಗೆದಿರುವುದು ಬಹಳ ಮಹತ್ವ. ಈ ಅಭಿಪ್ರಾಯ ವ್ಯಕ್ತ ಮಾಡಿದಾಗ, ಅನಂತರ ಯಾವ ಮುಸ್ಲಿಂ ಮುಖಂಡನೂ ಅದನ್ನು ಟೀಕಿಸದಿರುವುದು, ವಿರೋಧಿಸದಿರುವುದು ಸ್ವಾಗತಾರ್ಹ. ವಿವಾಹ, ವಾರಸಾ ಹಕ್ಕು ಮುಂತಾದ ವಿಷಯಗಳಲ್ಲಿ ಸ್ವಾತಂತ್ರ್ಯ ಭಾರತದ ಪ್ರಜೆಗಳ ನಡುವೆಯೇ ಧರ್ಮದ ಆಧಾರದ ಮೇಲೆ ತಾರತಮ್ಯದ ಪರಿಗಣನೆ ಇರುವುದು ಸರಿಯಲ್ಲೆಂಬ ಅಂಶವನ್ನು ಅವರು ಪ್ರತಿಬಿಂಬಿಸಿದ್ದಾರೆ. ಮುಸಲ್ಮಾನರಿಗೆ ಪ್ರತ್ಯೇಕ ನಾಗರಿಕ ಕಾನೂನು ಅನುಸರಿಸುವುದರಿಂದ ಆ ಧರ್ಮದವರಿಗೆ ಅದರಲ್ಲೂ ಮಹಿಳೆಯರಿಗೆ ಹಲವಾರು ಹಕ್ಕು ಸವಲತ್ತುಗಳು ಅಲಭ್ಯವಾಗುತ್ತಿವೆ. ಅಂಥವರಿಗೆ ನ್ಯಾಯ, ಸರಿಸಮಾನ ಹಕ್ಕು ಸಿಗುವಂತಾಗುವುದು ಅತ್ಯಗತ್ಯ.

ಕೇರಳದ ಕಾಂಗ್ರೆಸ್ ಮುಖಂಡರೂ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗಿನವರೂ ಏಕರೂಪಕ ಕಾನೂನು ಸಂಹಿತೆ ಬರಲೆಂಬ ಅಭಿಪ್ರಾಯ ವ್ಯಕ್ತ ಮಾಡಿದ್ದಕ್ಕೆ ಇ. ಎಂ. ಎಸ್. ನಂಬೂದಿರಿಪಾಡ್‌ರನ್ನು ಟೀಕಿಸಿದ್ದಾರೆ. ಹೈಕೋರ್ಟ್ ನ್ಯಾಯಾಧೀಶ ಪೋಟಿಯವರು ರಾಜೀನಾಮೆ ಕೊಡಬೇಕೆಂದು ಕೇಳಿದ್ದಾರೆ. ಆದರೆ ಕರ್ನಾಟಕ ಕಾಂಗ್ರೆಸ್ ಮುಖಂಡರಿಗಾಗಲೀ, ಕಟ್ಟಾ ಮುಸ್ಲಿಂ ಜಾತೀವಾದಿಗಳಿಗಾಗಲೀ ನ್ಯಾಯಾಧೀಶ ಮಳೀಮಠ ಅವರು ಹೇಳಿದ ಮಾತುಗಳ ಪೂರ್ಣ ಅರ್ಥ ತಿಳಿದಂತೆ ಕಂಡು ಬರುವುದಿಲ್ಲವೇ ಅಥವಾ ಆ ಸಲಹೆ ಸ್ವಾಗತಾರ್ಹವೆಂದು ಒಪ್ಪಿಕೊಂಡಿದ್ದಾರೆಯೋ ? ಅಂತೂ ಏಕರೂಪ ಕಾನೂನು ಸಂಹಿತೆ ತಂದು ಮುಸ್ಲಿಂ ಮಹಿಳೆಯರಿಗೆ ಹೆಚ್ಚಿನ ಸ್ವಾತಂತ್ರ್ಯ ಸರಿಸಮಾನ ಹಕ್ಕು ಒದಗಿಸುವ ಪ್ರಯತ್ನದಲ್ಲಿ ಕರ್ನಾಟಕದ ಮುಸ್ಲಿಂ ಬಾಂಧವರೂ, ಇಂದಿರಾ ಕಾಂಗ್ರೆಸ್ಸಿನವರೂ ನಮ್ಮ ಜೊತೆ ಸೇರುತ್ತಾರೆಂದು ಭಾವಿಸೋಣವೇ ?

ಆರ್. ಎಸ್. ಎಸ್. ವಿಷ : ದೇಶದ ಸಮಗ್ರತೆಗೆ ಗಂಡಾಂತರ

ಈಗೀಗ ಆರ್. ಎಸ್. ಎಸ್. ನವರೂ, ಆರ್.ಎಸ್.ಎಸ್. ಬೆಂಬಲಿತ ಹಿಂದೂ ಏಕತಾ, ಹಿಂದೂ ಸಮಾಜ, ಹಿಂದೂ ಮಹಾ ಸಮಾಜ ಸಂಘ ಸಂಸ್ಥೆಗಳು ವ್ಯವಸ್ಥಿತವಾಗಿ ನಮ್ಮ ಭಾರತ ದೇಶದ ಸಮಗ್ರತೆಗೆ ತೀವ್ರ ಗಂಡಾಂತರವಾದ ರೀತಿಯಲ್ಲಿ "ವಿಷ" ಹರಡುತ್ತಿದ್ದಾರೆ. ಈ ವಿಷದ ಮೂಲವೇ ಅವರ "ಹಿಂದೂ ದೇಶವು ಹಿಂದುಗಳಿಗೆ ಸೇರಿದ್ದು" ಹಿಂದೂ ದೇಶದಲ್ಲಿ ಇತರ ಜಾತಿ, ಮತೀಯ ವಿಭಾಗಗಳ ಜನ, "ಹಿಂದೂ ಗಳ ಒಪ್ಪಿಗೆಯಿಂದ ಮಾತ್ರ ಇರಬಹುದು ಎಂಬ" ಭಾವ ಪ್ರಚಾರ ಮತ್ತು ಪ್ರದರ್ಶನ.

ಅಂದರೆ, ಇತರ ಮತೀಯರು–ಮುಸ್ಲಿಮರು, ಕ್ರಿಶ್ಚಿಯನರು, ಪಾರ್ಸಿಗಳು, ಯಹೂದಿಗಳು— ಭಾರತದಲ್ಲಿ ಎರಡನೇ ತರಗತಿಯ ನಾಗರಿಕರು ಎಂದಾಯಿತು.

ಇದು ಭಾರತದ ಜಾತ್ಯಾತೀತ ಸಂವಿಧಾನಕ್ಕೆ, ಇದುಮೂಲಭೂತಹಕ್ಕುಗಳನ್ನು ಎಲ್ಲಾ ನಾಗರೀಕರಿಗೂ ಸಮಾನವಾಗಿ ಕೊಟ್ಟ ಭಾರತದ ಸಂವಿಧಾನಕ್ಕೆ ಅಪಪ್ರಚಾರ ಮಾತ್ರವಲ್ಲ, ಸಂವಿಧಾನದ ಉಲ್ಲಂಘನೆ.

ಆ ಭಾರತ ಸಂವಿಧಾನಕ್ಕೆ ಮೂಲಭೂತವಾಗಿ ವಿರೋಧವಾದ ಅಭಿಪ್ರಾಯವನ್ನು ಇದೀಗ ಆರ್.ಎಸ್. ಎಸ್. ನವರು ಸಂವಿಧಾನ ಜಾರಿಗೆ ಬಂದ 35 ವರ್ಷಗಳ ಅನಂತರ ದೇಶದಲ್ಲಿ ಹರಡುತ್ತಿದ್ದಾರೆ. ಅದೂ ಅಸ್ಸಾಂ, ಪಂಜಾಬ್, ಮೊದಲಾದೆಡೆ ದೇಶದ ಸಮಗ್ರತೆಯನ್ನೇ ಪ್ರಶ್ನಿಸುವರೀತಿಯಲ್ಲಿ ಕೆಲವೊಂದು ಘಟನೆಗಳು, ಚಳುವಳಿಗಳು ನಡೆಯುತ್ತಿರುವ ಈ ಸಂದರ್ಭದಲ್ಲೇ ಆರ್. ಎಸ್. ಎಸ್. ಮತ್ತಿತರ ಸಮಾನ ಭಾವದ ಸಂಘ ಸಂಸ್ಥೆಗಳು ಈ ರೀತಿಯ ಪ್ರಚಾರ ವಿಷವನ್ನು ಹರಡುತ್ತಿರುವುದು ದೇಶದ ಸಮಗ್ರತೆಗೆ ಗಂಡಾಂತರ.

ಅಗಸ್ಟ್ 15, 1947 ರಂದು ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಭಾರತದ ಮುಂದಾಳುಗಳು ಅತ್ಯಂತ ಸ್ಪಷ್ಟ ಮತ್ತು ನಿರ್ಧಿಷ್ಟ ಶಬ್ದಗಳಲ್ಲಿ ಜಗತ್ತಿಗೆ ಸಾರಿದ್ದಾರೆ. ಭಾರತವು ಯಾವುದೇ ಒಂದು ಮತದ, ಸಂಪ್ರದಾಯದ ಆಧಾರದಲ್ಲಿ – ಅಂದರೆ, ಹಿಂದೂ ಮತಿಯ ಸಂಪ್ರದಾಯದ ಆಧಾರದಲ್ಲಿ-ತನ್ನ ಆಡಳಿತೆಯನ್ನು, ಕೆಲಸ ಕಾರ್ಯಗಳನ್ನು ನಡೆಸುತ್ತಿಲ್ಲ. ಪಾಕಿಸ್ತಾನವು ಮುಸ್ಲಿಂ ಮತೀಯ ಸಂಪ್ರದಾಯದ ಆಧಾರದಲ್ಲಿ ಅಕ್ಷನ ಆಡಳಿತೆ ಮತ್ತು ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋದರೂ, ಭಾರತವು ಆ ಹಾದಿಯನ್ನು ತುಳಿಯಲಾರದು. ಜಾತ್ಯಾತೀತ ಮೌಲ್ಯದ ಆಧಾರದಲ್ಲೇ ಭಾರತವು ಮುಂದುವರಿಯುವುದು" ಎಂದು ಘಂಟಾ ಘೋಷವಾಗಿ ಸಾರಿದ್ದಾರೆ.

ಆದರೆ, ಇದೀಗ ಸರ್ವ ಸಾಮಾನ್ಯ ಕಾಂಗ್ರೆಸ್ (ಐ) ಆಡಳಿತೆಯ 35 ವರ್ಷಗಳ ನಂತರ ನಾವು ಏನನ್ನು ಕೇಳುತ್ತಿದ್ದೇವೆ ? ಏನನ್ನು ನೋಡುತ್ತಿದ್ದೇವೆ ?

ಎಲ್ಲೆಡೆಗಳಲ್ಲಿ ಅದೂ ಕಳೆದ 4-5 ವರ್ಷಗಳಲ್ಲಿ, ಹಿಂದೂ-ಮುಸ್ಲಿಂ ಕಲಹಗಳು ಒಂದಲ್ಲ, ಎರಡಲ್ಲ, ನೂರಾರು ಕಡೆಗಳಲ್ಲಿ ಉದ್ದೇಶ ಪೂರ್ವಕವಾಗಿ ಸಮಾಜವನ್ನು ಮತೀಯ ಆಧಾರದಲ್ಲಿ ವಿಭಜಿಸಲಾಗುತ್ತಿದೆ. ಉದ್ದೇಶ ಪೂರ್ವಕವಾಗಿ ಕ್ಷುಲ್ಲಕ ಪ್ರಶ್ನೆಗಳನ್ನು ಎತ್ತಿ ಹಿಡಿದು ಅವುಗಳಿಗೆ ಮತೀಯ ಬಣ್ಣ ಹಚ್ಚಿ "ಗಲಾಟೆ"ಗಳನ್ನು, ಗಲಬೆಗಳನ್ನು, ದಂಗೆಗಳನ್ನು ಸಂಘಟಿಸಲಾಗುತ್ತಿದೆ.

ಜನರ ನಿತ್ಯ ಜೀವನಕ್ಕೆ ಜನರ ಭದ್ರ ಜೀವನಕ್ಕೆ, ಜನರ ಪ್ರಗತಿಪರ ಮುನ್ನಡೆಗೆ, ಯಾವುದೇ ರೀತಿಯಲ್ಲಿ ಅವಶ್ಯಕವಲ್ಲದ-ತೀರಾ ತೃಣಸಮಾನವಾದ ಪ್ರಶ್ನೆಗಳಿಗೆ ಬೇತಾಳನ ರೂಪಗಳನ್ನು ಕೊಟ್ಟು, ಮತೀಯ ಭಾವನೆಗಳನ್ನು ಉದ್ದೇಶ ಪೂರ್ವಕವಾಗಿ ಎಬ್ಬಿಸಿ, ಸಮಾಜವನ್ನು ಒಡೆಯಲಾಗುತ್ತಿದೆ.

ಈ ಎಲ್ಲಾ ಘಟನೆಗಳ ಹಿಂದೆ ಒಂದು ಕೈ ಇದೆ. ಅದೇ ಆರ್. ಎಸ್. ಎಸ್ ನ ಕೈ. ಈಗೀಗ ಅದರ ಪ್ರತಿಕ್ರಿಯಾತ್ಮಕ ಸಂಸ್ಥೆಯಂತೆ ಜಮಾತೇ ಇಸ್ಲಾಮಿ ಸಂಸ್ಥೆಯ ಕೈ ಯೂ ಕಾಣುತ್ತಿದೆ.

ಈ ಗಲಭೆಗಳ ವಿಸ್ತಾರ, ತೀವ್ರತೆ, ಅವುಗಳಲ್ಲಿ ಉಪಯೋಗವಾಗುವ ಆಯುಧಗಳು, ಆ ಆಯುಧಗಳ ಆಧುನೀಕತೆ ಮತ್ತು ನವೀನತೆ, ಅವುಗಳಲ್ಲಿ ಖರ್ಚಾಗುವ ಹಣದ ರಾಶಿ, ಇವನ್ನೆಲ್ಲಾ ಪರಿಶೀಲಿಸಿ ಯೋಚಿಸಿದರೆ– ಈ ಸಂಸ್ಥೆಗಳು ಉದ್ದೇಶಪೂರ್ವಕವಾಗಿ ಭಾರತದ ಸಮಗ್ರತೆಯನ್ನು "ಹಾನಿಗೈಯ್ಯಲು" ಈ ಕಾರ್ಯವನ್ನೆಸಗುತ್ತಿವೆ ಎಂಬುದಂತೂ ಸ್ಪಷ್ಟ.

ಅಸ್ಸಾಂ, ಪಂಜಾಬ್, ಘಟನೆಗಳ ಹಿನ್ನೆಲೆಯಲ್ಲಿ ಕಂಡು ಬಂದಂತೆ, ಈ ಸಂಸ್ಥೆಗಳು ನಡೆಸುವ ಚಟುವಟಿಕೆಗಳ ಹಿನ್ನೆಲೆಯಲ್ಲೂ ಅಮೇರಿಕನ್ ಸಾಮ್ರಾಜ್ಯಶಾಹಿಗಳ "ಪಿತೂರಿಯ ಮಹಾ ಕೈ" ಯನ್ನು ಕಾಣಬಹುದು.

ಹಿಂದೂ ಏಕತಾ ಚಳುವಳಿ, ಹಿಂದೂ ಬೃಹತ್ ಮೇಳಗಳು– ಪ್ರಾದೇಶಿಕ ಮೇಳ, ರಾಷ್ಟ್ರೀಯ ಮೇಳ ಮತ್ತು ಅಂತರ ರಾಷ್ಟ್ರೀಯ ಮೇಳ – ಅದೇ ರೀತಿ ಮುಸ್ಲಿಂರ ಮಧ್ಯೆ ನಡೆಯುವ "ತೀವ್ರ ಅಂಥ ಮತೀಯ ಪ್ರಚಾರ ಮೇಳಗಳು" — ಇವುಗಳಿಗೆಲ್ಲಾ ಎಲ್ಲಿಂದ ಹಣ ? ಇವುಗಳಿಗೆಲ್ಲಾ ಎಲ್ಲಿಂದ ಪ್ರೋತ್ಸಾಹ ? ಇವುಗಳಿಗೆಲ್ಲಾ ಎಲ್ಲಿಂದ "ಹೊಸ ಹೊಸ ಅಭಿಪ್ರಾಯಗಳು" ?

ಯಾಕಾಗಿ ?

ಭಾರತದ ಸಮಗ್ರತೆಯನ್ನು ಎತ್ತಿ ಹಿಡಿಯುವುದಕ್ಕೆ ? ಅಲ್ಲ, ಭಾರತದ ಸಮಗ್ರತೆಯನ್ನು ಶಿಥಿಲಗೊಳಿಸುವುದಕ್ಕೆ.

ಭಾರತೀಯರೇ, ನೀವು ಸ್ವತಂತ್ರವಾಗಿ ನಿಮ್ಮ ಧೋರಣೆಗಳನ್ನು ರೂಪಿಸಿಕೊಂಡು ಹೋದರೆ, ನೀವು ನಮ್ಮ "ಅಮೇರಿಕನ್ ಸಾಮ್ರಾಜ್ಯಶಾಹಿಗಳ" ಹೇಳಿಕೆಗಳಿಗನುಸಾರವಾಗಿ ನಡೆಯದೆ ಹೋದರೆ, ನೋಡಿ ಏನನ್ನು ನೀವು ಕಾಣುವಿರಿ? ಶಿಥಿಲವಾದ ಭಾರತವನ್ನು ಎಂಬುದೇ ಈ ಎಲ್ಲಾ ಘಟನೆಗಳ ಹಿಂದೆ ಸೂಕ್ಷ್ಮಾತಿ ಸೂಕ್ಷ್ಮವಾಗಿ ಈ ಸಾಮ್ರಾಜ್ಯಶಾಹಿಗಳು ಭಾರತ ದೇಶದ ಜನಕ್ಕೆ ಕಳುಹಿಸುವ ಸಂದೇಶ.. ಸೂಚನೆ.

ಆರ್. ಎಸ್. ಎಸ್. ಮತ್ತು ಜಮಾತೇ ಇಸ್ಲಾಮಿಯವರು ಈ ಸಾಮ್ರಾಜ್ಯಶಾಹಿಗಳ ಈ ಕಾರ್ಯದಲ್ಲಿ ಏಜೆಂಟುಗಳಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದರಲ್ಲಿ ಏನೂ ಸಂಶಯವಿಲ್ಲ.

ಒಂದು ಉದಾಹರಣೆಯಿಂದ ನಾನು ಈ ಲೇಖನವನ್ನು ಮುಕ್ತಾಯಗೊಳಿಸುತ್ತೇನೆ. ಇತ್ತೀಚೆಗೆ ದ. ಕ. ಜಿಲ್ಲೆಯಲ್ಲಿ ಉಡುಪಿಯಲ್ಲಿ —ಬಿ.ಜೆ.ಪಿ. ಯವರು ಚುನಾವಣೆಯಲ್ಲಿ ಗೆದ್ದು ಬಂದ ಪ್ರದೇಶದಲ್ಲಿ-ಒಂದು ಗ್ರಾಮದಲ್ಲಿ ವಾಸವಾಗಿರುವ 18-20 ಮುಸ್ಲಿಂ ಕುಟುಂಬಗಳ ಮುಸ್ಲಿಮರು ರಮಜಾನ್ ತಿಂಗಳಲ್ಲಿ ತಮ್ಮ ಒಂದು ಮನೆಯಲ್ಲಿ "ಸಾಮೂಹಿಕವಾಗಿ ಪ್ರಾರ್ಥನೆ ಮಾಡುವುದಕ್ಕೆ" ಈ ಆರ್.ಎಸ್.ಎಸ್. ನ ಕೆಲವರು ಆಕ್ಷೇಪ ವ್ಯಕ್ತಪಡಿಸಿ, ಆ ಪ್ರಾರ್ಥನೆ ಸುಮಾರು 18 ದಿವಸ ಕಾಲ ನಿಲ್ಲುವಂತೆ ಮಾಡಿದ್ದರು. ಜಿಲ್ಲೆಯ ಎಲ್ಲಾ ಪಕ್ಷಗಳ, ಹಿರಿಯರ ಮತ್ತು ಅಧಿಕಾರಿಗಳ ಸಹಾಯದಿಂದ ಮತ್ತು ಬಿಜೆಪಿಯ ಕೆಲವು ಶಾಸಕರ "ದೂರ ದೃಷ್ಟಿ"ಯ ಮನೋಭಾವದಿಂದ 18 ದಿನಗಳ ನಂತರ ಇದೀಗ "ಸಾಮೂಹಿಕ ಪ್ರಾರ್ಥನೆಯನ್ನು" ಮಾಡಬಹುದು ಎಂದು ಸರ್ವಾನುಮತದಿಂದ ತೀರ್ಮಾನವಾಗಿದೆ.

ಇಂಥಹ ಘಟನೆಗಳು ಈ ಘಟನೆ-ಹಿಂದಿರುವ ಆಕ್ಷೇಪ ಮನೋಭಾವ- ಇದಕ್ಕೆ ಭಾರತದ ಸಮಗ್ರತೆಯನ್ನು ಎತ್ತಿ ಹಿಡಿಯುವ ಯಾವುದೇ ಭಾರತೀಯನು — ಪಕ್ಷ, ಪಂಗಡ ಬೇಧವಿಲ್ಲದೆ- ಏನು ಹೇಳಬೇಕು ?

○

'ಇಲ್ಲಸ್ಟ್ರೇಟೆಡ್ ವೀಕ್ಲಿ'ಯ ಅನೀತಿಯುತ ನಡವಳಿಕೆ

ಅರುಣ್ ಶೌರಿಯ ಲೇಖನಗಳು ಮತ್ತು ಅದರಲ್ಲಿನ ಆಪಾದನೆಗಳಿಗೆ ಪೊಲಿಟ್ ಬ್ಯೂರೋ ಸದಸ್ಯ ಕಾ|| ಎಂ. ಬಸವ ಪುನ್ನಯ್ಯ ಅವರ ಉತ್ತರವನ್ನು ಪ್ರಕಟಿಸುವ ಸಂಬಂಧದಲ್ಲಿ ಸಿ. ಪಿ. ಐ. (ಎಂ) ಪ್ರಧಾನ ಕಾರ್ಯದರ್ಶಿ ಮತ್ತು ವೀಕ್ಲಿಯ ಸಂಪಾದಕರ ನಡುವೆ ನಡೆದ ಪತ್ರ ವ್ಯವಹಾರವು ಇಲ್ಲಸ್ಟ್ರೇಟೆಡ್ ವೀಕ್ಲಿಯ ಅನೀತಿಯುತ ನಡವಳಿಕೆಯನ್ನು ಬಯಲಿಗೆಳೆಯುತ್ತದೆ.

ವೀಕ್ಲಿಯ ಜೂನ್ 3 ರ ಸಂಚಿಕೆಯಲ್ಲಿ ಕಾ|| ಎಂ. ಬಿ. ಅವರ ಮೊದಲನೆ ಲೇಖನ ಪ್ರಕಟವಾಗಿದ್ದು ಅದರಲ್ಲಿ ಆ ಲೇಖನ ಮಾತ್ರ ಸಂಪೂರ್ಣ ಉತ್ತರವಲ್ಲವೆನ್ನುವುದನ್ನು ತಿಳಿಸಿಲ್ಲ. ಅಲ್ಲದೆ ಈ ಲೇಖನವೇ ಶೌರಿಯ ಬರವಣಿಗೆಗೆ ಸಿ. ಪಿ. ಐ. (ಎಂ)ನ ಒಟ್ಟಾರೆ ಉತ್ತರವೆನ್ನುವ ರೀತಿಯಲ್ಲಿ ತಪ್ಪು ಅಭಿಪ್ರಾಯ ಬರುವಂತೆ ಮಾಡಲಾಗಿದೆ. ಅಲ್ಲದೆ ಕಾ|| ಎಂ.ಬಿ. ಅವರ ಲೇಖನದ ಶಿರೋನಾಮೆಯನ್ನೂ ಅಪಾರ್ಥ ಬರುವಂತೆ ತಿರುಚಲಾಗಿದೆ.

ನಂಬಿಕೆ ದ್ರೋಹ

ತುರ್ತಾಗಿ ಎರಡನೇ ಲೇಖನವನ್ನು ಕಳಿಸಬೇಕೆಂಬ ಸಂಪಾದಕರ ಆಗ್ರಹದಂತೆ ಜೂನ್ 3 ರ ಸಂಚಿಕೆ ಹೊರಬರುವ ಮೊದಲೇ ಎರಡನೇ ಲೇಖನ ಸಂಪಾದಕರನ್ನು ತಲುಪಿತ್ತು. ಮುಂದಿನ ಸಂಚಿಕೆಯಲ್ಲಿ ಲೇಖನವನ್ನು ಪ್ರಕಟಿಸಲಿಲ್ಲ. ವೀಕ್ಲಿಯ ಸಂಪಾದಕರ ನಂಬಿಕೆ ದ್ರೋಹ ಇಲ್ಲಿಗೇ ನಿಲ್ಲುವುದಿಲ್ಲ. ಕಾ|| ಎಂ. ಬಿ. ಅವರ ಉಳಿದ ಲೇಖನಗಳನ್ನು ಪ್ರಕಟಿಸದಿರುವುದನ್ನು ಪ್ರತಿಭಟಿಸಲು ಕಾ|| ಇ. ಎಂ. ಎಸ್. ಸಂಪಾದಕರನ್ನು ಸಂಪರ್ಕಿಸಿದಾಗ ಎಲ್ಲ ಲೇಖನಗಳನ್ನು ಪ್ರಕಟಿಸುವುದಾಗಿ ಆಶ್ವಾಸನೆ ನೀಡಿರುತ್ತಾರೆ. ಆದರೆ ಈ ಆಶ್ವಾಸನೆ ನೀಡುವ ಮೊದಲೆ ಉಳಿದ ಲೇಖನಗಳನ್ನು ಪ್ರಕಟಿಸಲು ಸಾಧ್ಯವಿಲ್ಲವೆಂಬ ಪತ್ರವನ್ನು ಸಂಪಾದಕರು ಇ. ಎಂ. ಎಸ್. ಗೆ ರವಾನಿಸಿದ್ದರು. ಉಳಿದ ಲೇಖನಗಳನ್ನು ಪ್ರಕಟಿಸದಿರಲು ಸಂಪಾದಕರು ಕೊಡುವ ಉತ್ತರವೆಂದರೆ (ಅ) ಕಾ|| ಎಂ. ಬಿ. ಅವರ ಲೇಖನ ಮುಂದುವರಿಯುತ್ತದೆಂದು ವೀಕ್ಲಿಯಲ್ಲಿ ಹೇಳದಿರುವುದು (ಆ) ಸಿ. ಪಿ. ಐ (ಎಂ)ನ ವಿವಿಧ ನಾಯಕರು ನಾಲ್ಕು ಲೇಖನಗಳನ್ನು ಬರೆಯುತ್ತಾರೆಂದು ಸಂಪಾದಕರು ಗ್ರಹಿಸಿದ್ದು. ಈ ಕಾರಣಗಳು ಎಷ್ಟು ಹಾಸ್ಯಾಸ್ಪದವೆಂದು ಹೇಳಬೇಕಾಗಿಲ್ಲ.

ತಪ್ಪನ್ನು ತಿದ್ದಿಕೊಳ್ಳಿ

ಜೂನ್ 16 ರಂದು ಕಾ|| ಇ. ಎಂ. ಎಸ್. ವೀಕ್ಲಿ ಸಂಪಾದಕ ಶ್ರೀಪ್ರೀತಿಷ್ ನಂದಿ ಅವರಿಗೊಂದು ಪತ್ರ ಬರೆದು ವಿಷಯದ ಸಂಪೂರ್ಣ ಅರಿವಿದ್ದರೂ ಮೊದಲನೆ ಲೇಖನದಲ್ಲಿ ಉತ್ತರವು ಮುಂದುವರಿಯುತ್ತದೆಂದು ಹೇಳದಿರುವುದು ಉಳಿದ ಲೇಖನ ಪ್ರಕಟಿಸದಿರಲು ಸರಿಯಾದ ಕಾರಣವಲ್ಲವೆಂದು ತಿಳಿಸಿದ್ದಾರೆ. ಕಾ| ಬಸವ ಪುನ್ನಯ್ಯ ಮೊದಲನೆಯ ಲೇಖನವನ್ನಷ್ಟೆ ಉತ್ತರವಾಗಿ ಬರೆದಿರುವರೆಂಬ ಭಾವನೆಯನ್ನು ವೀಕ್ಲಿ ಓದುಗರಲ್ಲಿ ಬರುವಂತೆ ಮಾಡಿರುವ ತಪ್ಪನ್ನು ಈಗಲಾದರೂ ಗೌರವಯುತವಾಗಿ ಒಪ್ಪಿಕೊಂಡು ಉಳಿದ ಲೇಖನಗಳ ಪ್ರಕಟಣೆಯ ಮೂಲಕ ತಿದ್ದಿಕೊಳ್ಳುತ್ತಾರೆಂದು ಇ. ಎಂ. ಎಸ್. ಆಶಿಸಿದ್ದಾರೆ.

ಬಣ್ಣ ಬಯಲಾಗಿದೆ

ವೀಕ್ಲಿಯ ಈ ಹಗರಣದೊಂದಿಗೆ ಬೂರ್ಜ್ವಾ ಪತ್ರಿಕೆಗಳ ನಿಜವಾದ ಬಣ್ಣ ಬಯಲಾಗಿದೆ. ಭಾರತದಲ್ಲಿ ಸಾಮ್ರಾಜ್ಯಶಾಹಿಗಳ ವಿರುದ್ಧದ ಹೋರಾಟದಲ್ಲಿ ಕಮ್ಯೂನಿಸ್ಟರ ನಿಜವಾದ ಪಾತ್ರದ ಸತ್ಯಾ ಸತ್ಯತೆಯು ತಿಳಿಯುವುದರ ಪರಿಣಾಮದಿಂದಾಗಿ ಆಸಕ್ತ ಹಿತಾಸಕ್ತಿಗಳು ಕಳವಳಗೊಂಡಿರಬೇಕು. ಅದು ಹೇಗೂ ಇರಲಿ, ಇಲ್ಲಿ ನಾವೊಂದು ಪ್ರಶ್ನೆ ಕೇಳಬೇಕಾಗಿದೆ ; ಯಾರ ಘನತೆ ಗೌರವ ಮಣ್ಣು ಮುಕ್ಕಿದೆ, ಮತ್ತು ಯಾರು ಗೌರವವನ್ನು ರಕ್ಷಿಸಿಕೊಳ್ಳುವುದಲ್ಲ ಬದಲಾಗಿ ಪುನಃ ಪಡೆಯಬೇಕಾಗಿದೆ ?

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು | 6

ಒಬ್ಬ ಪ್ರಾಮಾಣಿಕ (!) ಸಂಶೋಧಕ - ಎರಡು ಅಳತೆಗೋಲು

— ಕಾ|| ಎಂ. ಬಸವಪುನ್ನಯ್ಯ

(ನೂರನೆಯ ಭಾಗದ ಪ್ರಥಮ ಕಂತು)

ದಸ್ತಾವೇಜುಗಳ "ರಹಸ್ಯ" ಮಯತೆಯಿಂದಾಗಿ ಶೌರಿ ಸಿ.ಪಿ.ಐ. ಸಾಮ್ರಾಜ್ಯಶಾಹೀ ಸರಕಾರದೊಡನೆ ನಡೆಸಿದ ಮುಚ್ಚು ಮರೆಯ ವ್ಯವಹಾರಗಳನ್ನು ತಾನು ಬಯಲಿಗೆಳೆದಿರುವುದಾಗಿ ಹೇಳಿಕೊಳ್ಳುತ್ತಾರೆ. ಈ ಅಪಾದನೆಯಲ್ಲಿ ಮತ್ತು ತತ್ಪರಿಣಾಮವಾಗಿ ಕಮ್ಯೂನಿಸ್ಟ್ ಆಂದೋಲನವನ್ನು ಹೀಗಳೆಯುವ ಪ್ರಯತ್ನದಲ್ಲಿ ಕೊಂಚವಾದರೂ ಹುರುಳಿದ್ದಿದ್ದರೆ ಸಿ. ಪಿ. ಐ. ಆಗಿನ ಭಾರತ ಸರಕಾರಕ್ಕೆ ಯುದ್ಧ ಪ್ರಯತ್ನಗಳಲ್ಲಿ ತನ್ನ ಸಹಕಾರದ ಆಶಯವ್ಯಕ್ತಪಡಿಸುತ್ತಾ ಅರ್ಪಿಸಿದ ತಥಾಕಥಿತ "ರಹಸ್ಯ ಮನವಿ ಪತ್ರ" ದಲ್ಲಿನ ವಿಷಯ ಪಕ್ಷವು ಸಾರ್ವಜನಿಕವಾಗಿ ತಳೆದ ನಿಲುವಿಗಿಂತ ಭಿನ್ನವಾಗಿರಬೇಕಾಗಿತ್ತು.

ಒಂದು ಚಾರಿತ್ರಿಕ ಅರ್ಥದಲ್ಲಿ ಇಂತಹ ಪತ್ರವ್ಯವಹಾರದಲ್ಲಿ "ರಹಸ್ಯ" ವೆಂಬುದೇನೂ ಇಲ್ಲ, ಯಾಕೆಂದರೆ ಈ ಪತ್ರಗಳನ್ನು ಬರೆದಿರುವುದು ಸರಕಾರಕ್ಕೆ. ಆದ್ದರಿಂದ ಅವು ತಂತಾನೇ ಸಾರ್ವಜನಿಕ ಆಸ್ತಿಯಾಗಿ ಬಿಡುತ್ತವೆ. ಅರುಣ್ ಶೌರಿಗೆ ಅವು ಸಿಕ್ಕಿರುವುದು ಆದರಿಂದಾಗಿಯೇ.

ಜಾಗತಿಕ ಯುದ್ಧ ನಡೆಯುತ್ತಿದ್ದಂತೆ ಪರಿಸ್ಥಿತಿಯಲ್ಲಿ ಕಂಡು ಬಂದ ಬದಲಾವಣೆಯನ್ನು ಅಂದಾಜು ಮಾಡುವಲ್ಲಿಯಾಗಲೀ ಅಥವಾ ಇಂತಹ ಸಂದರ್ಭಕ್ಕೆ ತಕ್ಕಂತೆ ಅನುಸರಿಸಬೇಕಾದ ರಾಜಕೀಯ ಕಾರ್ಯತಂತ್ರಗಳ ಬಗ್ಗೆ ಇದ್ದ ಎರಡು ಪರಸ್ಪರ ಭಿನ್ನ ದೃಷ್ಟಿಕೋಣಗಳಲ್ಲಾಗಲೀ ಯಾವುದೇ ಗುಟ್ಟು ಅಥವ "ರಹಸ್ಯ" ಇರಲಿಲ್ಲ. ಈ ಎರಡು ದೃಷ್ಟಿಕೋನಗಳ ನಡುವೆ ಬಹಿರಂಗ ತಿಕ್ಕಾಟವೇ ಇತ್ತು. ಫ್ಯಾಸಿಸ್ಟ್ ಅಕ್ಷಕೂಟದ ವಿರುದ್ಧ ಯುದ್ಧ ಪ್ರಯತ್ನಗಳಿಗೆ ಸಕ್ರಿಯ ಹಾಗೂ ನೀತಿ ಬದ್ಧ ಬೆಂಬಲ ನೀಡಬೇಕೆಂಬುದು ಸಿ.ಪಿ.ಐ ನ ನಿಲುವಾಗಿದ್ದರೆ, ಸಾಮ್ರಾಜ್ಯ ಶಾಹಿಗಳಿಂದ ಭಾರತೀಯ ಸ್ವಾತಂತ್ರ್ಯದ ಬಗ್ಗೆ ಘೋಷಣೆಯೊಂದನ್ನು ಪಡೆದುಕೊಳ್ಳದ ಇಂತಹ ಒಂದು ಯುದ್ಧ ಪ್ರಯತ್ನಕ್ಕೆ ಬೆಂಬಲ ನೀಡುವುದಕ್ಕೆ ಕಾಂಗ್ರೆಸ್ಸಿನ ವಿರೋಧವಿತ್ತು. 1942ರ ಅಗಸ್ಟ 8 ರ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಠರಾವು ಮತ್ತು "ಕ್ವಿಟ್ ಇಂಡಿಯಾ" "ಮಾಡು ಇಲ್ಲವೆ ಮಡಿ" ಘೋಷಣೆಗಳ ಮೂಲಕ ಕಾಂಗ್ರೆಸ್ಸಿನ ಕಾರ್ಯಕ್ರಮ ಬ್ರಿಟಿಶ್ ಯುದ್ಧ ಪ್ರಯತ್ನಗಳನ್ನು ಸಕ್ರಿಯವಾಗಿ ವಿರೋಧಿಸಿ ಅವನ್ನು ಬುಡಮೇಲು ಮಾಡುವ ಕಾರ್ಯಕ್ರಮವಾಗಿ ಪರಿವರ್ತನೆಗೊಂಡಿತು. ಇದು ಒಂದು ನೀತಿಬದ್ಧ ವಿರೋಧವೇನೂ ಆಗಿರಲಿಲ್ಲ. ಬದಲಾಗಿ, ಕಾಂಗ್ರೆಸ್ ನಾಯಕತ್ವ ತನ್ನ ಸಾಮ್ರಾಜ್ಯಶಾಹಿ ವಿರೋಧಿ ನಿಲುವಿನಲ್ಲಿ ರಾಜಿ ಮಾಡಿಕೊಂಡಿದ್ದರಿಂದಾಗಿ ಅದುವರೆಗೆ ಅದಕ್ಕೆ ನಿರಾಕರಿಸಲ್ಪಟ್ಟಿದ್ದ ಒಂದು "ಬಹುಮಾನ" ವನ್ನು ಬ್ರಿಟಿಶರಿಂದ ಕಿತ್ತುಕೊಳ್ಳುವ "ಕಸರತ್ತಾಗಿ" ಯಷ್ಟೆ ಅದು ಮೂಡಿ ಬಂತು. ಇದಕ್ಕೆ ಫ್ಯಾಸಿಸಂ ವಿರುದ್ಧ ಹೋರಾಟ ವಿಶೇಷವಾಗಿ ರಾಷ್ಟ್ರೀಯ ಆಂದೋಲನಗಳಿಗೆ ಸಂಬಂಧಪಟ್ಟಂತೆ ಹೊಂದಿರುವ ಮಹತ್ವವನ್ನು ಅಂದಾಜು ಮಾಡುವಲ್ಲಿ ಕಾಂಗ್ರೆಸ್ ಪೆಚ್ಚುಮೋರೆ ಹಾಕಬೇಕಾಗಿ ಬಂದುದಕ್ಕಿಂತ ಉತ್ತಮವಾದ ಉದಾಹರಣೆ ಬೇರೆ ಸಿಗಲಾರದು. ದಾಸ್ಯಕ್ಕೊಳಗಾದ ಭಾರತೀಯ ಜನತೆ ಮತ್ತು ಜಗತ್ತಿನಲ್ಲಿ ಗುಲಾಮಗಿರಿಗೊಳಗಾದ ಇತರ ಜನತೆಯ ಅದೃಷ್ಟವನ್ನು ನಿರ್ಧರಿಸುವಲ್ಲಿ ಈ ಫ್ಯಾಸಿಸ್ಟ್ ವಿರೋಧಿ ಹೋರಾಟದ ಗೆಲುವು ಏಕ್‌ದಂ ಅಪ್ರಸ್ತುತ ಎಂದು ಕಾಂಗ್ರೆಸ್ ಪ್ರಚಾರ ಮಾಡುತ್ತಾ ಬಂತು. ಈ ಹಿಂದೆ ಫ್ಯಾಸಿಸಂ ಮತ್ತು ನಾಝಿವಾದದಲ್ಲಿ ಸಾಮ್ರಾಜ್ಯಶಾಹಿ ಉತ್ಕಟ ಗೊಂಡುದನ್ನು ಕಂಡಿದ್ದ ಕಾಂಗ್ರೆಸ್ ಈಗ ತನ್ನ ನಿಲುವನ್ನು ಸಂಪೂರ್ಣವಾಗಿ ಬದಲಿಸಿತು. ತನ್ನ ಈ ನಿಲುವನ್ನು ಸಕ್ರಿಯವಾಗಿ ಅನುಸರಿಸುವುದರಿಂದ ಫ್ಯಾಸಿಸಂ ವಿರುದ್ಧ ಹೋರಾಡುತ್ತಿದ್ದ ಜಾಗತಿಕ ಶಕ್ತಿಗಳಿಗೆ ತಟ್ಟಬಹುದಾದ ತೊಂದರೆಯ ಪರಿವೆಯೇ ಕಾಂಗ್ರೆಸ್ ಕಾರ್ಯಕಾರೀ ಸಮಿತಿಗಿರಲಿಲ್ಲ.

ಅಜ್ಞಾನದ ಪರಿಣಾಮ

ಭಾರತೀಯ ಜನಸಾಮಾನ್ಯರ ನಡುವೆ ಇಂತಹದೊಂದು ಅರಿವನ್ನು ಪಸರಿಸುತ್ತಿದ್ದ ಒಂದು ನಾಯಕತ್ವ ಶಾಂತಿ ಮತ್ತು ಸ್ವಾತಂತ್ರ್ಯಕ್ಕೆ ಬಂದಿದ್ದ ಫ್ಯಾಸಿಸ್ಟ್ ಬೆದರಿಕೆಯವಿರುದ್ಧ ಸ್ವತಂತ್ರ ಭಾರತೀಯ ಜನತೆ ತಾವೇ ಮೊದಲ ಹೆಜ್ಜೆ ಇಡುವಂತೆ ಮಾಡುವುದೇ ತನ್ನ ಆಶಯವಾಗಿತ್ತು ಎಂದು ಪ್ರಾಮಾಣಿಕವಾಗಿ ಹೇಳಿಕೊಳ್ಳಲು ಸಾಧ್ಯವೇ ?

ಕಾಂಗ್ರೆಸ್ ನಾಯಕತ್ವ ಅನುಸರಿಸಿಕೊಂಡು ಬಂದಿದ್ದ ರಾಜಿಭಾವದ ಧೋರಣೆಯ ನಿಜವಾದ ಇತಿಹಾಸದ ಅರಿವೇ ಇಲ್ಲದ ಶೌರಿಯವರಿಗೆ 1942 ರಲ್ಲಿ ಕಾಂಗ್ರೆಸ್ಸಿನ ನಿಲುವಿನಲ್ಲಿ ಇದ್ದಕ್ಕಿದ್ದಂತೆ ಕಂಡು ಬಂದ ತೀವ್ರತೆ ಎಷ್ಟೊಂದು ಪ್ರಭಾವ ಬೀರಿದೆ ಎಂದರೆ ಆತ ಈ ನಿಲುವಿನಲ್ಲಿ ಅಡಕವಾಗಿದ್ದ ಸಮಯ ಸಾಧಕತೆಯನ್ನು ಕಾಣಲು ವಿಫಲರಾಗಿದ್ದಾರೆ. ಅತ್ಯಂತ ಒಳ್ಳೆಯ ಮಾತಿನಲ್ಲಿ ಹೇಳುವುದಾದರೆ ಆತನ ಈ ಅಜ್ಞಾನವೇ ಸಿ. ಪಿ. ಐ. ನ ಸಾಮ್ರಾಜ್ಯ ಶಾಹೀ – ಪರ ನಿಲುವು ಮತ್ತು ಕಾರ್ಯ ನಿರ್ವಹಣೆಯನ್ನು ಅಗೆದು ತೆಗೆಯಬೇಕೆಂಬ ಆತನ ಆತುರಕ್ಕೆ ಮೂಲ. ಈ ನಿಷ್ಪ್ರಯೋಜಕ ಕಸರತ್ತಿಗಿಳಿಯುವ ಮೊದಲು ಶ್ರೀಮಾನ್ ಶೌರಿ ರಾಷ್ಟ್ರೀಯ ಆಂದೋಲನದ ಇತಿಹಾಸದ ಪರಿಚಯ ಮಾಡಿಕೊಂಡಿದ್ದರೆ ಚೆನ್ನಾಗಿತ್ತು. ಆರಂಭದಿಂದಲೇ ಸಿ. ಪಿ. ಐ. ಸಾಮ್ರಾಜ್ಯಶಾಹೀ ಹಿತಾಸಕ್ತಿಗಳು ಮತ್ತು ಭಾರತೀಯ ಜನತೆಯ ಹಿತಾಸಕ್ತಿಗಳು ಪರಸ್ಪರ ಎಂದೂ ತಾಳೆ ಹೊಂದಲಾರವು ಎಂಬ ದೃಷ್ಟಿ ಕೋನದ ದ್ಯೋತಕವಾಗಿತ್ತು. ಆದಕ್ಕಾಗಿ ಅದು ಬ್ರಿಟಿಶ್ ಸಾಮ್ರಾಜ್ಯ ಶಾಹಿಯ ಕೋಪವನ್ನು ಎದುರಿಸಬೇಕಾಗಿ ಬಂತು. ಭಾರತದಲ್ಲಿ ಮೂಡಿ ಬರುತ್ತಿದ್ದ ಕಮ್ಯುನಿಸ್ಟ್ ಆಂದೋಲನದ ವಿರುದ್ಧ ಹೂಡಿದ ಪೆಶಾವರ್, ಕಾನ್‌ಪುರ್ ಹಾಗೂ ಮೀರತ್ ಪಿತೂರಿ ಮೊಕದ್ದಮೆಗಳು ಭಾರತೀಯ ಕ್ರಾಂತಿ ಕಾರೀ ಆಂದೋಲನದ ಅಮೋಘ ಅಧ್ಯಾಯಗಳು ಮಾತ್ರವೇ ಅಲ್ಲ, ಜತೆಗೆ ಬ್ರಿಟಿಶ್ ಸಾಮ್ರಾಜ್ಯ ಶಾಹಿಯ ಕೋಪವನ್ನು ಅದು ಹೇಗೆ ಎದುರಿಸಬೇಕಾಗಿ ಬಂತು ಎಂಬುದಕ್ಕೆ ಪ್ರಬಲ ಸಾಕ್ಷಿ ಕೂಡ ಆಗಿದೆ.

ಕಾಂಗ್ರೆಸ್ಸಿನ ರಾಜಿಯ ಪರಂಪರೆ

ಈ ಕಮ್ಯುನಿಸ್ಟ್ ಪರಂಪರೆಗೂ, ಬ್ರಿಟಿಶರನ್ನು ಒಂದೆಡೆ ತಮ್ಮ ಆದರ್ಶ ಪೋಷಕರನ್ನಾಗಿ ಅರಿಸಿಕೊಂಡು, ಇನ್ನೊಂದೆಡೆ ಸದಾ ಆರ್ಥಿಕ ಮತ್ತು ರಾಜಕೀಯ ರಿಯಾಯ್ತಿಗಳಿಗಾಗಿ ಅವರೊಂದಿಗೆ ಚೌಕಾಸಿ ನಡೆಸುವ ಕಾಂಗ್ರೆಸ್ ನಾಯಕತ್ವದ ರಾಜೀಭಾವದ ನಿಲುವುಗಳಿಗೂ ಇರುವ ತೀಕ್ಷ್ಣ ವ್ಯತ್ಯಾಸವನ್ನು ಅರಿತು ಕೊಳ್ಳಲು ಕಾಂಗ್ರೆಸ್ಸಿನ ಐತಿಹಾಸಿಕ ದಾಖಲೆಗಳ ಒಂದು ಪುಟ ಬಹುಶಃ ಶೌರಿಗೆ ಸಹಾಯಕವಾಗಬಹುದು — "ಕಾಂಗ್ರೆಸ್ಸು, ಮಂದಗಾಮೀ ನಾಯಕರ ಹತೋಟಿಯಲ್ಲಿದ್ದಾಗ 1914-18ರ ಸಾಮ್ರಾಜ್ಯಶಾಹಿ ಯುದ್ಧಕ್ಕೆ, ತನ್ನ ಬೆಂಬಲ ಮತ್ತು ವಿಧೇಯತೆಯನ್ನು ಈ ಯುದ್ಧದ ಅವಧಿಯಲ್ಲಿ ನಡೆದ ತನ್ನ ನಾಲ್ಕು ವಾರ್ಷಿಕ ಅಧಿವೇಶನಗಳಲ್ಲಿ ಪ್ರತಿಯೊಂದರಲ್ಲೂ ಅಂಗೀಕರಿಸಿದ ಠರಾವುಗಳಲ್ಲಿ ಘೋಷಿಸಿತು. ಯುದ್ಧ ಮುಗಿದ ನಂತರ ದೆಹಲಿಯಲ್ಲಿ 1918 ರಲ್ಲಿ ನಡೆದ ಅಧಿವೇಶನದಲ್ಲಿ ಕೂಡ ಬ್ರಿಟಿಶ್ ಪ್ರಭುವಿಗೆ ವಿಧೇಯತೆ ಪ್ರಕಟಿಸುವ ಮತ್ತು ಯುದ್ಧವನ್ನು ಯಶಸ್ವಿಯಾಗಿ ಮುಗಿಸಿದ್ದಕ್ಕಾಗಿ ಆತನನ್ನು ಅಭಿನಂದಿಸುವ ಠರಾವನ್ನು ಅಂಗೀಕರಿಸಲಾಯಿತು. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಅಧಿಕೃತ ಮೆಚ್ಚುಗೆಗೆ ಪಾತ್ರವಾಯ್ತು. 1914 ರ ಅಧಿವೇಶನದಲ್ಲಿ ಮದ್ರಾಸಿನ ಗವರ್ನರ್ ಲಾರ್ಡ್ ಪೆಂಡಲ್ಯಾಂಡ್, 1915 ರ ಅಧಿವೇಶನದಲ್ಲಿ ಮುಂಬೈಯ ಗವರ್ನರ್ ಲಾರ್ಡ್ ವಿಲ್ಲಿಂಗ್ಡನ್ ಮತ್ತು 1916 ರ ಅಧಿವೇಶನದಲ್ಲಿ ಸಂಯುಕ್ತ ಪ್ರಾಂತಗಳ (ಯು. ಪಿ.) ಗವರ್ನರ್ ಸರ್ ಜೇಮ್ಸ್ ಮೆಸ್ಟನ್ ಭಾಗವಹಿಸಿದರು. ಈ ಎಲ್ಲಾ ಅಧಿವೇಶಗಳಲ್ಲಿ ಈ ಸರಕಾರೀ ಪ್ರತಿನಿಧಿಗಳಿಗೆ ಅತ್ಯಂತ ಗೌರವಪೂರ್ಣ ಸ್ವಾಗತ ನೀಡಲಾಯಿತು. ಲಂಡನ್‌ನಲ್ಲಿ ಪ್ರತಿನಿಧಿಗಳಾಗಿದ್ದ ಭಾರತೀಯ ಮುಖಂಡರು ಯುದ್ಧ ಆರಂಭವಾದೊಡನೆ ಆತುರಾತುರವಾಗಿ ಸರಕಾರಕ್ಕೆ ತಮ್ಮ ಬೆಂಬಲ ನೀಡಿದರು. ಲಜಪತರಾಯ್, ಜಿನ್ನಾ, ಸಿನ್ಹಾ ಹಾಗೂ ಇತರರನ್ನೊಳಗೊಂಡಿದ್ದ ಒಂದು ಕಾಂಗ್ರೆಸ್ ಪ್ರತಿನಿಧಿ ಮಂಡಲ ಆಗ ಲಂಡನ್ನಿನಲ್ಲಿತ್ತು. ಈ ಪ್ರತಿನಿಧಿ ಮಂಡಲ ಅಲ್ಲಿನ ಗೃಹ ಕಾರ್ಯದರ್ಶಿ [ಸೆಕ್ರೆಟರಿ ಆಫ್ ಸ್ಟೇಟ್]ಗೆ ಒಂದು ಪತ್ರ ಬರೆದು "ಭಾರತದ ರಾಜ ಮಹಾರಾಜರುಗಳು ಮತ್ತು ಜನತೆ (ಬ್ರಿಟಿಶ್) ಸಾಮ್ರಾಜ್ಯದ ಅವಿಳಂಬ ಗೆಲುವಿಗಾಗಿ ಸದಾಸಿದ್ಧರಾಗಿ, ಸ್ವಯಮಿಚ್ಛೆಯಿಂದ ತಮ್ಮ ಸಾಮರ್ಥ್ಯವನ್ನೆಲ್ಲಾ ಉಪಯೋಗಿಸಿಕೊಂಡು ಸಹಕರಿಸುತ್ತಾರೆ ಮತ್ತು ಅದಕ್ಕಾಗಿ ತಮ್ಮ ದೇಶದ ಸಂಪನ್ಮೂಲಗಳನ್ನು ಸಾಮ್ರಾಜ್ಯ ಪ್ರಭುಗಳ ವಶಕ್ಕೆ ಒಪ್ಪಿಸಲು ಸಿದ್ಧರಾಗಿದ್ದಾರೆ" ಎಂಬ ತಮ್ಮ ಖಂಡಿತ ಅಭಿಪ್ರಾಯವನ್ನು ಘೋಷಿಸಿದರು. [ಆರ್. ಪಿ. ದತ್, "ಇಂಡಿಯಾ ಟುಡೇ," ಪುಟ 332–33]

ಆ ನಂತರ ಕೂಡಾ ಬೂರ್ಜ್ವಾ–ಭೂಮಾಲಕ ನಾಯಕತ್ವ ಉದ್ದೇಶಪೂರ್ವಕವಾಗಿಯೇ ಸುಧಾರಣಾವಾದೀ ವಿರೋಧದ ಮಾರ್ಗವನ್ನು ಆರಿಸಿಕೊಂಡು ಜನಸಾಮಾನ್ಯರು ಸಾಮ್ರಾಜ್ಯ ಶಾಹಿಯ ವಿರುದ್ಧ ಸಮರಶೀಲ ಚಟುವಟಿಕೆಗಳಿಗೆ ಇಳಿಯದಂತೆ ತಡೆಯಲು ಸದಾ ಹೊಸ ಹೊಸ ತಂತ್ರಗಳನ್ನು ಸೃಷ್ಟಿಸುವಲ್ಲಿ ನಿರತವಾಗಿರುತ್ತಿತ್ತು. ಕಾಂಗ್ರೆಸ್ ಮತ್ತು ಗಾಂಧೀ ನಾಯಕತ್ವದ ಭಾರತೀಯ ರಾಷ್ಟ್ರೀಯ ಆಂದೋಲನದ ಸಮಸ್ತ ಇತಿಹಾಸವೇ ಬ್ರಿಟಿಶ್ ಸಾಮ್ರಾಜ್ಯ ಶಾಹೀ ಆಳರಸರೊಂದಿಗೆ ಮಾಡಿಕೊಂಡ ಅಪಮಾನಕರ ರಾಜಿಗಳ ಒಂದು ಜೀವಂತ ಸ್ಮಾರಕ. ತನ್ನದು ರಾಜಿಯ, ಪರಸ್ಪರ ಸಂಧಾನದ ಹಾಗೂ ಸುಧಾರಕ ಭಾವದ ಮಾರ್ಗ ಎಂದು ಹೇಳಿ ಕೊಳ್ಳುವುದರಲ್ಲಿ ಗಾಂಧಿ ವಿಶೇಷ ಬಗೆಯ ಹೆಮ್ಮೆ ಪಡುತ್ತಿದ್ದರು. ಮತ್ತು ಅವರು ಈ ಕಾರಣದಿಂದಾಗಿ ಹಲವು ಬ್ರಿಟಿಶ್ ಮುತ್ಸದ್ದಿಗಳ ಪ್ರಶಂಸೆ ಗಿಟ್ಟಿಸಿಕೊಂಡರು.

ಶೌರಿಯ ಗೋಳಾಟ

ಶ್ರೀಮಾನ್ ಶೌರಿಯವರೇ, ಸ್ವಾತಂತ್ರ್ಯ ಹೋರಾಟದ ನಿಜವಾದ ಚರಿತ್ರೆಯನ್ನು ಅಳಿಸಿಹಾಕಿ ಕಮ್ಯೂನಿಸ್ಟರನ್ನು ಬ್ರಿಟಿಶರ ಚಮಚಾಗಳೆಂದೋ, ಮಾಸ್ಕೋದ ಏಜೆಂಟರೆಂದೋ ಚಿತ್ರಿಸುತ್ತಾ ಕಾಂಗ್ರೆಸ್ ಹೈಕಮಾಂಡನ್ನು, ಅದರ "ಕ್ವಿಟ್ ಇಂಡಿಯಾ" ಘಟ್ಟದಲ್ಲೇ ಆಗಲಿ ಅತ್ಯಂತ ಸಾಮರ್ಥ್ಯಶಾಲಿ

> ಬೂರ್ಜ್ವಾ–ಭೂಮಾಲಕ ನಾಯಕತ್ವ ಉದ್ದೇಶಪೂರ್ವಕವಾಗಿಯೇ ಸುಧಾರಣಾವಾದೀ ವಿರೋಧದ ಮಾರ್ಗವನ್ನು ಆರಿಸಿಕೊಂಡು ಜನಸಾಮಾನ್ಯರು ಸಾಮ್ರಾಜ್ಯಶಾಹಿಯ ವಿರುದ್ಧ ಸಮರಶೀಲ ಚಟುವಟಿಕೆಗಳಿಗೆ ಇಳಿಯದಂತೆ ತಡೆಯಲು ಸದಾ ಹೊಸ ಹೊಸ ತಂತ್ರಗಳನ್ನು ಸೃಷ್ಟಿಸುವಲ್ಲಿ ನಿರತವಾಗಿರುತ್ತಿತ್ತು. ಕಾಂಗ್ರೆಸ್ ಮತ್ತು ಗಾಂಧಿ ನಾಯಕತ್ವದ ಭಾರತೀಯ ರಾಷ್ಟ್ರೀಯ ಆಂದೋಲನದ ಸಮಸ್ತ ಇತಿಹಾಸವೇ ಬ್ರಿಟಿಶ್ ಸಾಮ್ರಾಜ್ಯಶಾಹೀ ಆಳರಸರೊಂದಿಗೆ ಮಾಡಿಕೊಂಡ ಅಪಮಾನಕರ ರಾಜಿಗಳ ಒಂದು ಜೀವಂತ ಸ್ಮಾರಕ. ತನ್ನದು ರಾಜಿಯ ಪರಸ್ಪರ ಸಂಧಾನದ ಹಾಗೂ ಸುಧಾರಕ ಭಾವದ ಮಾರ್ಗ ಎಂದು ಹೇಳಿಕೊಳ್ಳುವುದರಲ್ಲಿ ಗಾಂಧಿ ವಿಶೇಷ ಬಗೆಯ ಹೆಮ್ಮೆ ಪಡುತ್ತಿದ್ದರು. ಮತ್ತು ಅವರು ಈ ಕಾರಣದಿಂದಾಗಿ ಹಲವು ಬ್ರಿಟಿಶ್ ಮುತ್ಸದ್ದಿಗಳ ಪ್ರಶಂಸೆ ಗಿಟ್ಟಿಸಿಕೊಂಡರು.

ಎಂದು ಉತ್ಪ್ರೇಕ್ಷಿಸಲು ಪ್ರಯತ್ನಿಸ ಬೇಕಾದರೆ ನಾಲ್ಕು ಕುರುಡು, ಅಡ್ಡಾದಿಡ್ಡಿ ಲೇಖನಗಳಿಗಿಂತ ಬಹಳ ಹೆಚ್ಚಿನದೇನಾದರೂ ಬೇಕಾಗುತ್ತದೆ.

ಕಾಂಗ್ರೆಸ್ಸಿನ ಸಾಮರ್ಥ್ಯವನ್ನು ಉತ್ಪ್ರೇಕ್ಷಿಸಿ ಹಾಡುವ ಅದೇ ಧಾಟಿಯಲ್ಲಿ ಶೌರಿ "ಕಾಂಗ್ರೆಸ್ ಬೂರ್ಜ್ವಾ ವರ್ಗವನ್ನು ಪ್ರತಿನಿಧಿಸುತ್ತದೆ. ಅದಕ್ಕೆ ಸಾಮ್ರಾಜ್ಯಶಾಹಿಗಿಂತಲೂ ಜನತೆಯ ಭಯವೇ ಜಾಸ್ತಿ, ಅದು ಜನತೆಯನ್ನೊಳಗೊಂಡ ಒಂದು ಹೋರಾಟ ಆರಂಭಿಸಲು ಭಯಪಡುತ್ತದೆ. ಯಾಕೆಂದರೆ ಬ್ರಿಟಿಶರ ವಿರುದ್ಧ ಆರಂಭಿಸಿದ ಹೋರಾಟ ಅಂತಿಮವಾಗಿ ತನ್ನ ವಿರುದ್ಧವೇ ತಿರುಗಿಕೊಳ್ಳುತ್ತದೆ ಎಂಬ ಭೀತಿ ಅದಕ್ಕೆ" ಎಂದು ಸಿಪಿಐ 1940 ರಲ್ಲಿ ಪ್ರಕಟಿಸಿದ ತನ್ನ ಒಂದು ಕರಪತ್ರದಲ್ಲಿ ಘೋಷಿಸಿದೆ ಎಂದು ಗೋಗರೆಯುತ್ತಾರೆ.

ಆದರೆ ನಾವು ಈ ಹಿಂದೆ ತೋರಿಸಿಕೊಟ್ಟಿರುವಂತೆ, ಸಾರಭೂತವಾಗಿ ಕಾಂಗ್ರೆಸ್ಸು ಆಗ ಮತ್ತು ಈಗಲೂ ಬೂರ್ಜ್ವಾವರ್ಗ ಮತ್ತು ಭೂಮಾಲಕ ವರ್ಗದ ರಾಜಕೀಯ ಪ್ರತಿನಿಧಿಯಾಗಿದ್ದು, ತಾನೇ ಆರಿಸಿಕೊಂಡ ಬಂಡವಾಳಶಾಹೀ ಮಾರ್ಗ ಅನುಸರಿಸುತ್ತಿದೆ, ಜತೆಗೆ ಇಂದಿನವರೆಗೂ ವಿದೇಶೀ ಹಣಕಾಸಿನ ಬಂಡವಾಳದೊಂದಿಗೆ ಸಕ್ರಿಯ ಸಹಕಾರದ ತನ್ನ ನೀತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದೆ. ಇದಕ್ಕೆ ಇತ್ತೀಚಿನ ವಿನಾಶಕಾರೀ ಪುರಾವೆಯೆಂದರೆ ಐ.ಎಮ್.ಎಫ್. ಸಾಲದ ಮೂಲಕ ಭಾರತದ ಆರ್ಥಿಕ ಸಾರ್ವಭೌಮತೆಯನ್ನು ಒತ್ತೆಯಿಡುವ ಆಳುವ ಪಕ್ಷದ ಕ್ರಮಗಳು. ಈ ಪ್ರಶ್ನೆಯ ಬಗ್ಗೆ ಶ್ರೀಮಾನ್ ಶೌರಿ ಮೌನವನ್ನೇ ಆರಿಸಿಕೊಂಡಿದ್ದಾರೆಂದ ಮಾತ್ರಕ್ಕೆ ಅದೊಂದು ಇತಿಹಾಸದ ವಾಸ್ತವಾಂಶ ಎಂಬುದೇನೂ ಸುಳ್ಳಾಗುವುದಿಲ್ಲ.

ಮುಂದುವರಿದು "ರಾಷ್ಟ್ರೀಯ ಆಂದೋಲನದ ಪ್ರಮುಖದ್ಯೋತಕ" ಗಾಂಧಿಯವರನ್ನು ಸಿಪಿಐ "ತಮಾಷೆಗೀಡು ಮಾಡಿತು, ವಿರೋಧಿಸಿತು, ಬಯಲಿಗೆಳೆಯಿತು" ಎಂದು ಶೌರಿ ಗೋಳಾಡುತ್ತಾರೆ. ಅದೇ ಕಾರಣಕ್ಕಾಗಿ ಸುಭಾಸ್ ಚಂದ್ರ ಬೋಸರು ಫ್ಯಾಸಿಸ್ಟ್-ವಿರೋಧೀ ಯುದ್ಧದ ಸಮಯದಲ್ಲಿ ನಡೆಸಿದ ಕಾರ್ಯ ಚಟುವಟಿಕೆಗಳ ವಿರುದ್ಧ ಸಿಪಿಐ ಮಾಡಿದ ರಾಜಕೀಯ ಟೀಕೆಯನ್ನೂ ಶೌರಿ ಉದಾಹರಿಸುತ್ತಾರೆ.

ಕಾಂಗ್ರೆಸ್ ಮುಖಂಡರು ಫ್ಯಾಸಿಸ್ಟ್ ವಿರೋಧೀ ಯುದ್ಧಪ್ರಯತ್ನಗಳನ್ನು ಬೆಂಬಲಿಸುವ ಸಿಪಿಐನ ರಾಜಕೀಯ ಕಾರ್ಯತಂತ್ರಾತ್ಮಕ ನಿಲುವಿನ ವಿರುದ್ಧ ನಡೆಸಿದ ತಮ್ಮ ಟೀಕಾಟದಲ್ಲಿ ಕಮ್ಯುನಿಸ್ಟರನ್ನು "ಮಾಸ್ಕೋದ ಏಜೆಂಟರು" ಮತ್ತು "ಬ್ರಿಟಿಶ್ ಆಳರಸರ ಚಮಚಾಗಳು" ಎಂದೆಲ್ಲಾ ಹೀಗಳೆದೂ ಕೂಡಾ ತಮ್ಮ ಗೌರವ ಮರ್ಯಾದೆಯನ್ನು ಉಳಿಸಿಕೊಳ್ಳಬಲ್ಲರಾದರೆ ಮತ್ತು ಶೌರಿ ಕೂಡಾ ಅವರನ್ನು ವಿಮರ್ಶೆಗೀಡು ಮಾಡದೆ ಅನುಸರಿಸಬಲ್ಲರಾದರೆ ಸಿಪಿಐ ಮಾತ್ರ ಏಕೆ ಕಾಂಗ್ರೆಸ್ ಮುಖಂಡರನ್ನು ಫ್ಯಾಸಿಸಂನ ಧ್ಯೇಯಕ್ಕೆ ಮತ್ತು ದೇಶದಲ್ಲಿ ಅದರ "ಪಂಚಮದಳ"ಕ್ಕೆ ನೆರವು ನೀಡಿದರೆಂದು ಆಪಾದಿಸಿದ ಮಾತ್ರಕ್ಕೆ "ಬಯಲು" ಆಗಬೇಕು? ಇದಕ್ಕೆ ಕಾರಣ ಬಹಳ ಸರಳ- ಸ್ವಾತಂತ್ರ್ಯ ಆಂದೋಲನದಿಂದ ಮುಂದಕ್ಕೆ ತೀಕ್ಷ್ಣವಾಗಿ ಕಂಡುಬರಲಾರಂಭಿಸಿದ ಎರಡು ವಿಭಿನ್ನ ವರ್ಗ ಪರಿವೀಕ್ಷಣೆ ಮತ್ತು ವರ್ಗ ನಿಲುವುಗಳನ್ನು ಈ ಮೂಲಕ ಮಸುಕುಗೊಳಿಸಿ ಈ ಅವಧಿಯ ಇತಿಹಾಸವೆಂದರೆ ಅಧಿಕೃತವಾಗಿ ಒಪ್ಪಿಕೊಳ್ಳಲ್ಪಟ್ಟಿರುವ ಘಟನೆಗಳು ಬಿಟ್ಟು ಹೆಚ್ಚೇನೂ ಇಲ್ಲ ಎಂದು ತೋರಿಸಿಕೊಡಬೇಕೆನ್ನುವ ಪ್ರಯತ್ನ ಅಷ್ಟೆ.

ಮಸುಕುಗೊಳಿಸುವ ಯತ್ನ

ಈ ಮೂಲಕ ಸ್ವಾತಂತ್ರ್ಯ ಹೋರಾಟದಿಂದ ಮುಂದಕ್ಕೆ ಭಾರತೀಯ ಜನತೆಯ ಸಮ್ಮುಖ ಒಂದು ಪರ್ಯಾಯ ವರ್ಗ ನಿಲುವು ತೆರೆದಿಟ್ಟ ಸಾಧ್ಯತೆಗಳನ್ನು ನಿರಾಕರಿಸುವ ಪ್ರಯತ್ನ ಅವರದ್ದು. ಯಾಕೆಂದರೆ ಈ ಪರ್ಯಾಯ ನಿಲುವು ಇಂದೂ ಕೂಡಾ ಕಾಂಗ್ರೆಸ್ಸಿನ ವರ್ಗ ಧೋರಣೆಗೆ ಅಪಾಯವೊಡ್ಡಿದ್ದು, ಅದರ ದುರಾಡಳಿತಕ್ಕೆ ಒಂದು ಪ್ರಮುಖ ಪರ್ಯಾಯವಾಗಿದೆ. ಸುಭಾಸ್ ಬೋಸ್ ಮತ್ತು ಅವರ ಪಾತ್ರದ ಪ್ರಶ್ನೆಯ ಬಗ್ಗೆ ಶೌರಿ ಮತ್ತು ಅವರ ತರಹೆಯ ಅಭಿಪ್ರಾಯ ಹೊಂದಿದ ಸಿಪಿಐನ ಇತರ ಟೀಕಾಕಾರರು ಸುಭಾಸ್ ಬೋಸರನ್ನು ಭಾರತೀಯ ಸ್ವಾತಂತ್ರ್ಯದ ಎಂದೂ ಏನನ್ನು ಬಿಟ್ಟುಕೊಡದ ಹೋರಾಟಗಾರ ಎಂದು ಚಿತ್ರಿಸುವ ಹವ್ಯಾಸ ಇಟ್ಟುಕೊಂಡಿದ್ದಾರೆ. ಆದರಿಂದ ಫ್ಯಾಸಿಸ್ಟ್ ವಿರೋಧಿ ಯುದ್ಧದ ಅವಧಿಯಲ್ಲಿ ಅವರ ನಿಲುವನ್ನು ಕುರಿತಾದ ಯಾವುದೇ ಟೀಕೆಯನ್ನು ಅವರು ದೂಷಣೆ ಎಂದು ಜಪಾನೀ ಸೇನೆಯೊಂದಿಗೆ ಅವರು ಮಿತ್ರತ್ವ ಬೆಳೆಸಿದುದಕ್ಕೆ ನಡೆಸಿದ ಗೇಲಿಯೆಂಬ ಹಣೆಪಟ್ಟಿ ಹಚ್ಚಿ ಬಿಡುತ್ತಾರೆ. ಸುಭಾಷ್ ಬೋಸರು ಹಿಡಿದ ರಾಜಕೀಯ ದಾರಿಯ ಹಿಂದಿನ ಪ್ರೇರಣೆಯನ್ನು ಪ್ರಶ್ನಿಸುವುದು ತಪ್ಪು ಎಂಬುದೇನೋ ನಿಜ. ಆದರೆ ಅವರ ತಂತ್ರಗಳು ಹೇಗೆ ಫ್ಯಾಸಿಸ್ಟ್ ವಿರೋಧಿ ಧ್ಯೇಯೋದ್ದೇಶಕ್ಕೆ ಮಾರಕವಾದವು ಎಂದು ನಾವು ತೋರಿಸಿಕೊಟ್ಟಂತೆ ತೋರಿಸಿಕೊಡುವುದರಲ್ಲಿ ಏನೂ ತಪ್ಪಿಲ್ಲ. ಅಥವ ಅದು ಸುಳ್ಳು ದೂಷಣೆಯೂ ಆಗುವುದಿಲ್ಲ.

ಆದರೆ ಈ ರಾಜಕೀಯ ಮಾರ್ಗದ ಟೀಕೆಯ ಬಗ್ಗೆ ಕೇವಲ ಸಿ. ಪಿ. ಐ. ಮೇಲೇನೇ ಏಕೆ ತಪ್ಪು ಹೊರಿಸಬೇಕು?

ಗಾಂಧಿಗೆ ಒಬ್ಬ ಪತ್ರಿಕಾಕರ್ತ "ನಿಮ್ಮ ಮತ್ತು ಸುಭಾಸ್ ಬೋಸರ ನಡುವೆ ಭಿನ್ನಾಭಿಪ್ರಾಯ ಇಲ್ಲ ಎಂದು ಬೋಸರು ರೇಡಿಯೋದಲ್ಲಿ ಹೇಳುವಾಗ, ನೀವು ಈಗ ಯಾವುದೇ ರೀತಿಯಲ್ಲಾದರೂ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಹೊರಟಿದ್ದೀರಿ ಎಂದು ಹೇಳುವಾಗ ಜನರಿಗೆ ಸಂತೋಷವಾಗುತ್ತದೆ" ಎಂದು ಹೇಳಿದಾಗ ಅವರ ಪ್ರತಿಕ್ರಿಯೆ ಏನಿತ್ತು? ವಾಸ್ತವದಲ್ಲಿ ಗಾಂಧಿಯ ಉತ್ತರ ಹೀಗಿತ್ತು..." ಆದರೆ ಆತ ತಪ್ಪು ಮಾಡಿದ್ದಾರೆ ಎಂಬುದು ನಿಮಗೆ ಗೊತ್ತಿರಬೇಕೆಂದು ನಾನು ಭಾವಿಸುತ್ತೇನೆ. ನನಗೆ ಆತ ಕೊಟ್ಟಿರುವ ಶುಭಾಶಯಗಳನ್ನು ಸ್ವೀಕರಿಸುವುದು ಬಹುಶಃ ನನಗೆ ಸಾಧ್ಯವಿಲ್ಲ. ಯಾವರೀತಿಯಲ್ಲಾದರೂ ಸ್ವಾತಂತ್ರ್ಯ ಎಂಬುದು ನನ್ನ ಅರ್ಥಕೋಶದಲ್ಲಿ ಇಲ್ಲ. ಉದಾಹರಣೆಗೆ, ನಮ್ಮ ಸ್ವಾತಂತ್ರ್ಯದಲ್ಲಿ ನೆರವಾಗಲು ವಿದೇಶೀಯರನ್ನು ಕರೆತರುವುದು ಎಂಬ ಅರ್ಥ ಅದರಲ್ಲಿ ಸೇರಿಲ್ಲ. ಇದು ಒಂದು ವಿಧದ ಗುಲಾಮಗಿರಿಯ ಬದಲು ಇನ್ನೊಂದನ್ನು, ಬಹುಶಃ ಇನ್ನಷ್ಟು ಕೆಟ್ಟ ಗುಲಾಮಗಿರಿಯನ್ನು ವಿನಿಮಯ ಮಾಡಿಕೊಂಡಂತೆ ಎಂಬುದರಲ್ಲಿ ನನಗೆ ಸಂಶಯವಿಲ್ಲ.

> ಆ ಘಟ್ಟದಲ್ಲಿ ಸುಭಾಸ್ ಬಾಬುಗಳ ದಾರಿಯನ್ನು ಟೀಕಿಸುವ ವಿಶೇಷ ಅಧಿಕಾರ ಗಾಂಧಿಗೆ ಮಾತ್ರ ಇತ್ತು, ಸಿ. ಪಿ. ಐ ಅದೇ ಹಕ್ಕನ್ನು ಚಲಾಯಿಸಿದರೆ ಅದು ಮಿಥ್ಯಾರೋಪವಾಗುತ್ತದೆ ಎಂದು ಶೌರಿ ಹೇಳಿ ಕೊಳ್ಳ ಬಯಸುತ್ತಾರೆಯೋ? ಚಾರಿತ್ರಿಕಸಂಶೋಧಕನೊಬ್ಬನಿಗೆ ಎರಡು ಅಳತೆಗೋಲುಗಳೇ. ?

"ಅಲ್ಲದೆ ಸುಭಾಷ್ ಬಾಬು ನಾನು ಸರಿಯೆಂದು ಹೇಳಿದಾಗ ನಾನು ಉಬ್ಬಿ ಹೋಗಲಾರೆ. ಯಾಕೆಂದರೆ ಅವರು ಹೇಳುವ ಅರ್ಥದಲ್ಲಿ ನಾನು ಸರಿಯಾದ ದಾರಿಯಲ್ಲಿಲ್ಲ. ಯಾಕೆಂದರೆ ಹಾಗೆ ಹೇಳುವಾಗ ಅವರು ನನ್ನ ಮೇಲೆ ಜಪಾನೀ-ಪರ ಭಾವನೆಗಳನ್ನು ಆರೋಪಿಸುತ್ತಾರೆ. ಯಾವುದೋ ಒಂದು ವಿಚಿತ್ರ ತಪ್ಪು ಲೆಕ್ಕಾಚಾರದಿಂದ ನಾನು ಈ ದೇಶದೊಳಗೆ ಜಪಾನಿಯರ ಪ್ರವೇಶಕ್ಕೆ ನೆರವಾಗುತ್ತಿದ್ದೇನೆ ಎಂಬ ವಾಸ್ತವಾಂಶವನ್ನು ಅರಿತುಕೊಳ್ಳಲಿಲ್ಲ ಎಂದು ಕಂಡುಬಂದರೆ ಹೋದ ದಾರಿಯಲ್ಲೇ ಹಿಂದಿರುಗಿ ಬರಲು ನಾನು ಹಿಂಜರಿಯಬಾರದು. ಜಪಾನಿಯರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ನಾವು ಬ್ರಿಟಿಶರನ್ನು ಎದುರಿಸಲು ಜೀವ ತೆರುವಂತೆ ಅವರನ್ನು ಎದುರಿಸಲೂ ಕೂಡ ಜೀವ ತೆರಲೇಬೇಕು ಎಂಬುದು ನಿಶ್ಚಯ.... ಬ್ರಿಟಿಶರು ತಲೆ ತಗ್ಗಿಸಬೇಕು, ಭಾರತದಲ್ಲಿ ಅವರ ಅಧಿಕಾರ ನಾಶಗೊಳ್ಳಬೇಕು ಎಂಬುದಕ್ಕಾಗಿ ಅಕ್ಷಕೂಟದ ಶಕ್ತಿಗಳಿಗೆ ನಾವು ವಿಜಯ ಹಾರೈಸಿದ್ದೇವೆ ಎಂಬ ಕುರುಹಾದರೂ ಸಂಶಯ ಇದ್ದೀತೇ?" ಎಂದು ಗಾಂಧೀಜಿ ಆ ತನ್ನ ಗೆಳೆಯನಲ್ಲಿ ಇಂತಹ ಏನಾದರೂ ಕಲ್ಪನೆ ಇದ್ದರೆ ಅದನ್ನು ತೆಗೆದುಹಾಕಲು ಪ್ರಶ್ನಿಸಿದ್ದರು.

ಕೇವಲ ಗಾಂಧೀಜಿಯ ಹಕ್ಕು?

"ನೀವು ರೇಡಿಯೋ ಸಂದೇಶಗಳನ್ನು ಕೇಳುವುದಿಲ್ಲವೇ?" ಎಂದು ಆ ಗೆಳೆಯ ಮರುಪ್ರಶ್ನೆ ಹಾಕಿ ಮುಂದುವರೆಸಿದ— "ನಾನು ಅತ್ಯಂತ ತತ್ಪರತೆಯಿಂದ ಕೇಳುತ್ತೇನೆ. ನೀವು ಅಕ್ಷಕೂಟದ ಶಕ್ತಿಗಳತ್ತ ವಾಲುತ್ತಿದ್ದೀರಿ, ಬ್ರಿಟಿಶ್ ಆಳ್ವಿಕೆಯನ್ನು ಕಿತ್ತೆಸೆಯಲು ಹೊರಗಿನ ನೆರವು ಪಡೆಯುವ ಬಗ್ಗೆ ಸುಭಾಸ್ ಬಾಬುರವರ ಅಭಿಪ್ರಾಯಗಳ ಸಮೀಪ ಬರುತ್ತಿದ್ದೀರಿ ಎಂಬ ಅರ್ಥ ಬರುವಂತೆ ನಿಮ್ಮ ಬರವಣಿಗೆಗಳನ್ನು ಆ ಸಂದೇಶಗಳು ವಿವರಿಸುತ್ತವೆ. ಈ ಬಗ್ಗೆ ನೀವು ನಿಮ್ಮ ನಿಲುವನ್ನು ಸ್ಪಷ್ಟಗೊಳಿಸಬೇಕೆಂದು ನಾನು ಬಯಸುತ್ತೇನೆ. ಎಲ್ಲರಿಗೂ ಚೆನ್ನಾಗಿ ತಿಳಿದಿರುವ ನಿಮ್ಮ ಅಭಿಪ್ರಾಯಗಳ ತಪ್ಪು ಅರ್ಥವಿವರಣೆ ಈಗ ಅಪಾಯಕಾರೀ ಮಟ್ಟ ತಲುಪಿದೆ."

ಇದಕ್ಕೆ ಗಾಂಧೀಜಿ ನೀಡಿದ ಉತ್ತರ ಹೀಗಿತ್ತು— "ನೀವು ಈ ಪ್ರಶ್ನೆ ಕೇಳಿದ್ದಕ್ಕೆ ನನಗೆ ಸಂತೋಷವಾಗಿದೆ. ವಿದೇಶೀ ಆಳ್ವಿಕೆಯ ನೊಗದಿಂದ ತನ್ನನ್ನು ಬಿಡಿಸಿಕೊಳ್ಳುವ ಭಾರತದ ಪ್ರಯತ್ನದಲ್ಲಿ ನೆರವಾಗಲು ಯಾವುದೇ ಶಕ್ತಿಕೂಟವನ್ನು ಸುಪ್ರೀತಗೊಳಿಸುವ ಆಕಾಂಕ್ಷೆ ನನಗೆ ಇಲ್ಲ, ಬ್ರಿಟಿಷರ ಬದಲು ಬೇರೆ ಯಾವುದೇ ಆಳ್ವಿಕೆಯನ್ನು ವಿನಿಮಯ ಮಾಡಿಕೊಳ್ಳುವ ಆಕಾಂಕ್ಷೆ ನನಗೆ ಇಲ್ಲ. ನನಗೆ ಗೊತ್ತಿರದ ಶತ್ರುವಿಗಿಂತ ನನಗೆ ಗೊತ್ತಿರುವ ಶತ್ರುವೇ ವಾಸಿ. ಅಕ್ಷಕೂಟದ ಶಕ್ತಿಗಳ ಸ್ನೇಹಪೂರ್ಣ ಮಾತುಗಳಿಗೆ ನಾನು ಎಂದೂ ಕಿಂಚಿತ್ತಾದರೂ ಮಹತ್ವ ಕೊಟ್ಟಿಲ್ಲ. ಅವರು ಭಾರತಕ್ಕೆ ಬರುವುದಾದರೆ ವಿಮೋಚಕರಾಗಿ ಬರುವುದಿಲ್ಲ, ಬದಲಿಗೆ ಕೊಳ್ಳೆಯಲ್ಲಿ ಪಾಲುದಾರರಾಗಿ ಬರುತ್ತಾರೆ. ಆದ್ದರಿಂದ ಸುಭಾಸ್ ಬಾಬುಗಳ ಧೋರಣೆಯನ್ನು ನಾನು ಅನುಮೋದಿಸುವ ಪ್ರಶ್ನೆಯೇ ಇಲ್ಲ. ನಮ್ಮಿಬ್ಬರ ನಡುವಿನ ಹಳೆಯ ಭಿನ್ನಾಭಿಪ್ರಾಯ ಇನ್ನೂ ಮುಂದುವರೆಯುತ್ತಿದೆ. ಇದರರ್ಥ ಅವರ ತ್ಯಾಗವನ್ನು ಅಥವಾ ಅವರ ದೇಶಪ್ರೇಮವನ್ನು ನಾನು ಶಂಕಿಸುತ್ತೇನೆ ಎಂದೇನಲ್ಲ." (ಹರಿಜನ 1942 ರ ಆಗಸ್ಟ್ 2)

ಆ ಘಟ್ಟದಲ್ಲಿ ಸುಭಾಸ್ ಬಾಬುಗಳ ದಾರಿಯನ್ನು ಟೀಕಿಸುವ ವಿಶೇಷ ಅಧಿಕಾರ ಗಾಂಧಿಗೆ ಮಾತ್ರ ಇತ್ತು, ಸಿಪಿಐ ಅದೇ ಹಕ್ಕನ್ನು ಚಲಾಯಿಸಿದರೆ ಅದು ಮಿಥ್ಯಾರೋಪವಾಗುತ್ತದೆ ಎಂದು ಶೌರಿ ಹೇಳಿಕೊಳ್ಳ ಬಯಸುತ್ತಾರೆಯೇ? ಚಾರಿತ್ರಿಕ ಸಂಶೋಧಕನೊಬ್ಬನಿಗೆ ಎರಡು ಅಳತೆಗೋಲುಗಳೇ?

ಗಂಭೀರ ವಾಗ್ವಾದವಲ್ಲ

ಶೌರಿ ಇನ್ನೊಂದು ಅಂಶವನ್ನು ಗಮನಿಸಬೇಕಾಗಿದೆ. "ಸುಭಾಷ್ ಬಾಬು ಹೈಕಮಾಂಡ್‌ನಲ್ಲಿ-ಅವರಲ್ಲಿ ನೀವೂ ಸೇರುತ್ತೀರಿ- ಒಂದು ಸುಧಾರಣಾವಾದೀ ಹಾಗೂ ಒಂದು ಉದಾರ ಪ್ರವೃತ್ತಿ ಕಾಣಬರುತ್ತಿದೆ ಎನ್ನುವುದು ಸರಿಯಲ್ಲವೇ?' ಎಂಬ ಪ್ರಶ್ನೆಗೆ ಉತ್ತರಿಸುತ್ತಾ "ಹೌದು ನಿಜವಾಗಿಯೂ ಅವರು ಹೇಳುವುದು ಸರಿ. ದಾದಾಭಾಯಿ ಒಬ್ಬ ಮಹಾನ್ ಸುಧಾರಣಾವಾದಿಯಾಗಿದ್ದರು. ಗೋಖಲೆ ಒಬ್ಬ ಮಹಾನ್ ಉದಾರವಾದಿಯಾಗಿದ್ದರು. ಅದೇ ರೀತಿ ಮುಂಬೈ ಪ್ರೆಸಿಡೆನ್ಸಿಯ ಅನಭಿಷಿಕ್ತ ದೊರೆ ಫಿರೋಜ್ ಮೆಹ್ತಾ ಕೂಡಾ. ಅದೇ ರೀತಿ ಸುರೇಂದ್ರನಾಥ ಬ್ಯಾನರ್ಜಿ ಕೂಡಾ. ಅವರು ತಮ್ಮ ಕಾಲದಲ್ಲಿ ದೇಶದ ರಕ್ಷಕರಾಗಿದ್ದರು. ನಾವು ಅವರ ಉತ್ತರಾಧಿಕಾರಿಗಳು. ಅವರಿಲ್ಲದಿರುತ್ತಿದ್ದರೆ ನಾವಿರುತ್ತಿರಲಿಲ್ಲ.... ಆತನನ್ನು ನಿಲ್ಲಿಸಿಕೊಂಡಿರುವುದು ಆತನ ಸ್ವಂತ ವಿವೇಕವೇ. ಮತ್ತು ಆ ಬಗೆಯಲ್ಲಿ ಆತನೂ ನನ್ನಷ್ಟೇ ಸುಧಾರಣಾವಾದಿ ಮತ್ತು ಉದಾರವಾದಿ."

"ಸುಧಾರಣಾವಾದಿ," "ಉದಾರವಾದಿ" ಮತ್ತು "ಕ್ರಾಂತಿಕಾರ-ವಿರೋಧಿ" ಇತ್ಯಾದಿ ಪದಗಳು ಕೆಲವು ಜನಗಳಿಗೆ ಇನ್ನು ಕೆಲವು ಟೀಕಾಕಾರರು ಅನ್ವಯಿಸಿದ ರಾಜಕೀಯ ವಿಶೇಷಣಗಳು. ಇಂತಹ ವಿಶೇಷಣಗಳನ್ನು ಉಪಯೋಗಿಸುವುದು ಅಪರಾಧವೇನಲ್ಲ. ಆದರೆ ಶ್ರೀಮಾನ್ ಶೌರಿ ಸಿಪಿಐ ಗಾಂಧೀಜಿಯನ್ನು ಸುಧಾರಣಾವಾದಿ ಎಂದು ವರ್ಣಿಸಿದ್ದಕ್ಕೆ ಕೆಂಡಕಾರುತ್ತಾರೆ. ಗಾಂಧೀಜಿಯಂತೂ ಈ ಲೇಬಲ್ ಅನ್ನು ತನಗೆ ಹಚ್ಚಿಕೊಳ್ಳುವಲ್ಲಿ ಹೆಮ್ಮೆ ಪಟ್ಟುಕೊಳ್ಳುವಂತೆ ಕಾಣುತ್ತಿತ್ತು. ಅಜ್ಞಾನಿಗಳನ್ನು, ವಿಷಯದ ಅರಿವಿಲ್ಲದವರನ್ನು ಕಮ್ಯುನಿಸ್ಟರ ವಿರುದ್ಧ ಎತ್ತಿಕಟ್ಟಲು "ಗಾಂಧೀವಾದ"ದಲ್ಲಿ ನಂಬಿಕೆ ಮತ್ತು ವಿಧೇಯತೆಯನ್ನು ನಟಿಸುವುದು ಗಂಭೀರ ಸೈದ್ಧಾಂತಿಕ ವಾಗ್ವಾದವಾಗುವುದಿಲ್ಲ. ಅದು ಅಪಹಾಸ್ಯವಾಗುತ್ತದಷ್ಟೆ.

ಈ ವಿಷಯವನ್ನೇ ಮತ್ತಷ್ಟು ಮುಂದುವರಿಸುತ್ತಾ, ಗಾಂಧಿಯ ಪತ್ರಗಳಿಗೆ ಸಿಪಿಐ ನಾಯಕತ್ವದ ತೀಕ್ಷ್ಣ ಪ್ರತಿಕ್ರಿಯೆಯ ಮೂಲಕ ಗಾಂಧಿಯ ಬಗ್ಗೆ ಕೂಡಾ ಕಮ್ಯುನಿಸ್ಟರು ಹೊಂದಿದ್ದ ಅವಿಧೇಯ ನಿಲುವನ್ನು ತೋರಿಸಲು ಶೌರಿ ಪಿ. ಸಿ. ಜೋಶಿಯವರು ಗಾಂಧಿಗೆ ಬರೆದ ಪತ್ರಗಳಿಂದ ಒಂದು ಹೇಳಿಕೆಯನ್ನು ಉದ್ಧರಿಸುತ್ತಾರೆ. ಬಹುಶಃ ಗಾಂಧಿಗೆ ಅಧಿಕೃತವಾಗಿ ದೈವತ್ವದ ಪಟ್ಟ ಕಟ್ಟಿರುವುದರ ಲಾಭ ಪಡೆಯುವ ಆಸೆ ಶೌರಿಯದು. ಆದರೆ ಈ ರೀತಿ ದೈವತ್ವದ ಪಟ್ಟ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧಿಯ ಪಾತ್ರವನ್ನೂ ವಸ್ತುನಿಷ್ಠವಾಗಿ ವಿಶ್ಲೇಷಿಸುವ ಅತ್ಯಂತ ದೃಢ ಪ್ರಯತ್ನಗಳಿಗೆ ಅಡ್ಡಿಯೊಡ್ಡುತ್ತಿದೆ. ಖಂಡಿತವಾಗಿಯೂ ಒಬ್ಬ ಪ್ರಾಮಾಣಿಕ ಸಂಶೋಧಕ ಇದರ ವಿಮರ್ಶೆಗೆ ಕಾರಣಗಳನ್ನು ಒದಗಿಸಲು ಕೇಳಬೇಕಾಗಿತ್ತು.

(ಮುಂದುವರಿಯುತ್ತದೆ.)

ಬೆಂಗಳೂರು

ಫುಟ್‌ಪಾತ್ ವ್ಯಾಪಾರಿಗಳ ಸಭೆ

ಜುಲೈ 7ರಂದು ಫುಟ್‌ಪಾತ್ ವ್ಯಾಪಾರಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಬಹಿರಂಗ ಸಭೆ ನಡೆಯಿತು. ಕರ್ನಾಟಕ ರಾಜ್ಯ ಸಿ. ಐ. ಟಿ. ಯು. ಅಧ್ಯಕ್ಷ ಹಾಗೂ ವಿಧಾನಸಭಾ ಸದಸ್ಯರಾದ ಕಾ|| ಎಲ್. ಸೂರ್ಯನಾರಾಯಣರಾವ್ ರವರು ಭಾಷಣ ಮಾಡಿ, ಬಡ ಫುಟ್‌ಪಾತ್ ವ್ಯಾಪಾರಿಗಳ ಮೇಲೆ, ನಗರ ಸಭೆ ಅಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳು ನಡೆಸುತ್ತಿರುವ ಕಿರುಕುಳ ದೌರ್ಜನ್ಯಗಳನ್ನು ಖಂಡಿಸಿ ಕಳೆದ 15 ವರ್ಷಗಳಿಂದ ಇವರ ಸಮಸ್ಯೆಗಳನ್ನು ಬಗೆಹರಿಸಲು ಸಂಘವು ನಡೆಸಿದ ಹೋರಾಟವನ್ನು ವಿವರಿಸಿದರು. ಸಂಬಂಧಪಟ್ಟ ಪೌರಾಡಳಿತ ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಸಂಘದ ನಿಯೋಗ ಹೋಗಿ ಸಮಸ್ಯೆ ಬಗೆಹರಿಸಲು ಒತ್ತಾಯಿಸಬೇಕೆಂದು, ಬಗೆಹರಿಸಲು ಸರ್ಕಾರ ಪ್ರಯತ್ನ ಪಡದಿದ್ದರೆ ನಗರದ ಎಲ್ಲಾ ಫುಟ್‌ಪಾತ್ ವ್ಯಾಪಾರಸ್ಥರು ಒಂದುಗೂಡಿ ತೀವ್ರವಾದ ಹೋರಾಟವನ್ನು ಮಾಡಬೇಕೆಂದು ಕರೆಯಿತ್ತು ಬಡ ಜನರ ಮೇಲೆ ಪೋಲೀಸರು ದೌರ್ಜನ್ಯ ನಡೆಸದೆ ಸಮಾಜ ಘಾತಕರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರು. ವಕೀಲರಾದ ಕೆ. ಆರ್. ವೆಂಕಟೇಶಗೌಡ, ಕಾರ್ಯಾಧ್ಯಕ್ಷ ಎಸ್ ಎಂ. ಪ್ಯಾರು, ಎ. ಪಿ. ನರಸಿಂಹನ್ ರವರು ಸ್ವಾಗತ ಭಾಷಣ ಮಾಡಿ ಕೊನೆಯಲ್ಲಿ ವಂದನಾರ್ಪಣೆ ಮಾಡಿದ ಪ್ರಧಾನ ಕಾರ್ಯದರ್ಶಿ ಎ.ವಿ.ರಮೇಶ್ ರವರು ಪೋಲೀಸರಿಂದ ಫುಟ್‌ಪಾತ್ ವ್ಯಾಪಾರ ಮಾಡುವವರ ಮೇಲೆ ನಡೆಯುತ್ತಿರುವ ಕಿರುಕುಳವನ್ನು ಖಂಡಿಸಿ ಸಂಘಟಿತರಾಗಿ ಅನ್ಯಾಯದ ವಿರುದ್ಧ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಸುಮಾರು 500ಕ್ಕೂ ಹೆಚ್ಚು ಜನ ಸಭೆಯಲ್ಲಿ ಭಾಗವಹಿಸಿದ್ದರು.

ಪಠ್ಯ ಪುಸ್ತಕಗಳ ಪೂರೈಕೆಗೆ ಒತ್ತಾಯ

ತಾರೀಕು || 4-5 84 ರಂದು ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯು ಸಭೆ ಸೇರಿ, ಶಾಲಾ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಸರಕಾರವು ಪಠ್ಯ ಪುಸ್ತಕ ಒದಗಿಸದೆ ಇರುವುದರಿಂದ ಬಡ ಬೀಡಿ ಕಾರ್ಮಿಕರ ವಿದ್ಯಾರ್ಥಿಗಳ ಶಿಕ್ಷಣದ ಸಮಸ್ಯೆಯು ಬಗ್ಗೆ ಸಭೆಯು ಬಹಳ ಗಂಭೀರವಾಗಿ ಚರ್ಚೆ ಮಾಡಿ ಸರಕಾರವು ಈ ಬಗ್ಗೆ ಕೂಡಲೇ ಶಾಲಾ ಮಕ್ಕಳಿಗೆ ಬೇಕಾದ ಎಲ್ಲಾ ಪುಸ್ತಕಗಳನ್ನು ಪ್ರತೀ ವರ್ಷ ಸಮಯಕ್ಕೆ ಸರಿಯಾಗಿ ಒದಗಿಸಬೇಕೆಂದು ಈ ಸಭೆಯಲ್ಲಿ ಒತ್ತಾಯಿಸಿದರು. ಆದರೆ ಈಗ ಶಾಲೆ ಪ್ರಾರಂಭವಾಗಿ ಎರಡೂವರೆ ತಿಂಗಳು ಆದರೂ ವಿದ್ಯಾರ್ಥಿಗಳಿಗೆ ಸಿಗದೆ ಇರುವುದರಿಂದ ಅದರಲ್ಲಿ ಕೆಲವು ಬಡಬೀಡಿ ಕಾರ್ಮಿಕರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಬೇಕಾಗಿ ಪ್ರತೀ ಮಂಗಳವಾರ ಕೆಲಸವನ್ನು ಬಿಟ್ಟು ರೇಶನ್ ಅಂಗಡಿಯಲ್ಲಿ ಕ್ಯೂ ನಿಲ್ಲುವ ಹಾಗೆ, ಪುಸ್ತಕ ಅಂಗಡಿಯಲ್ಲಿ ನಿಂತು ಕೊನೆಗೆ ಪುಸ್ತಕ ಸಿಗದೆ ಹಿಂದೆ ಬರಬೇಕಾಗಿದೆ. ಇದರಿಂದ ಶಾಲಾ ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತು ಅವರ ತಂದೆ ತಾಯಿಯವರ ಕೆಲಸಕ್ಕೆ ತುಂಬಾ ತೊಂದರೆಯಾಗುವುದರಿಂದ ಸರಕಾರವು ಶಾಲಾ ಮಕ್ಕಳಿಗೆ ಬೇಕಾದ ಪುಸ್ತಕವನ್ನು ಕೂಡಲೇ ಒದಗಿಸಿಕೊಡುವಂತೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘ ಸರಕಾರವನ್ನು ಒತ್ತಾಯಿಸಿದೆ.

ತೋಟ ಕಾರ್ಮಿಕರ ನಿಧನಕ್ಕೆ ಸಂತಾಪ

ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಅಧ್ಯಕ್ಷ ಕಾ. ಸಿ. ನಂಜುಂಡಪ್ಪನವರು ಕೆಳಕಂಡ ಪತ್ರಿಕಾ ಹೇಳಿಕೆಯನ್ನು ಕೊಟ್ಟಿರುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಸುಂಕಸಾಲೆಯ ಬಳಿ 3-7-84 ರಂದು ಭೂಕುಸಿತದಿಂದ 14 ಪ್ಲಾಂಟೇಷನ್ ಕಾರ್ಮಿಕರ ನಿಧನದ ಬಗ್ಗೆ ರಾಜ್ಯ ಸಿ. ಐ. ಟಿ. ಯು ಸಂತಾಪ ವ್ಯಕ್ತ ಮಾಡುತ್ತದೆ. ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಲಾಗಿದೆ.

ಈ ದುರಂತವು ನಮ್ಮ ರಾಜ್ಯದ ಪ್ಲಾಂಟೇಷನ್ ಕಾರ್ಮಿಕರಿಗೆ ಪ್ಲಾಂಟರುಗಳು ಒದಗಿಸಿರುವ ಮನೆಗಳು ಯಾವ ಸ್ಥಿತಿಯಲ್ಲಿವೆ ಎಂಬುದನ್ನು ಬಯಲು ಮಾಡಿದೆ. ಇನ್ನಾದರೂ ಸರ್ಕಾರವು ಪ್ಲಾಂಟೇಷನ್ ಲೇಬರ್ ಆಕ್ಟ್ ಅನ್ವಯ ಕಠಾರದ ಮತ್ತು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡು ಎಲ್ಲಾ ಪ್ಲಾಂಟೇಷನ್ ಕಾರ್ಮಿಕರಿಗೆ ಕಾಯಿದೆ ಪ್ರಕಾರ ಸ್ಟ್ಯಾಂಡರ್ಡ್ ಟೈಪ್ ಮನೆಗಳು ವಾಸಿಸಲು ದೊರಕುವಂತೆ ಖಾತರಿ ಪಡಿಸಿಕೊಳ್ಳಬೇಕು.

ಮೃತರ ಕುಟುಂಬಗಳಿಗೆ ಶೀಘ್ರ ಪರಿಹಾರ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಗಿದೆ.

ಕುಂದಾಪುರ

ಜಾತಿವಾದಿಗಳಗೂಂಡಾಗಿರಿ ಪ್ರತಿಭಟಿಸಿ ಎಸ್‌ಎಫ್‌ಐ ಕರೆ

ಕುಂದಾಪುರದ ಭಂಡಾರಕಾರ್ಸ್ ಕಾಲೇಜಿನ ವಿದ್ಯಾರ್ಥಿ ಸಂಘಕ್ಕೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸುವ ಭಾರತ ವಿದ್ಯಾರ್ಥಿ ಫೆಡರೇಶನ್‌ನ (ಎಸ್. ಎಫ್. ಐ.) ಅಭ್ಯರ್ಥಿಗಳನ್ನು ಜಾತಿವಾದಿ ಗೂಂಡಾಗಳ ಗುಂಪೊಂದು ಗೂಂಡಾಗಿರಿಯ ಮೂಲಕ ಬೆದರಿಸುತ್ತಿರುವುದನ್ನು ಎಸ್. ಎಫ್. ಐ. ಕುಂದಾಪುರ ಟೌನ್ ಸಮಿತಿ ತೀವ್ರವಾಗಿ ಖಂಡಿಸಿದೆ. ಗೂಂಡಾಗಿರಿಯ ಬೆದರಿಕೆಯನ್ನು ಸುಸಂಘಟಿತವಾಗಿ ಪ್ರತಿರೋಧಿಸಬೇಕೆಂದು ಎಸ್‌ಎಫ್‌ಐ ವಿದ್ಯಾರ್ಥಿಗಳಿಗೆ ಕರೆನೀಡಿದೆ.

ವಿದ್ಯಾರ್ಥಿ ಸಂಘಕ್ಕೆ ನೇರ ಚುನಾವಣೆ[ಜನರಲ್ ಎಲೆಕ್ಷನ್] ನಡೆಸುವುದರ ಮೂಲಕ ಘರ್ಷಣೆಯನ್ನು ಕಡಿಮೆ ಮಾಡಿ ಶಾಂತ ವಾತಾವರಣ ನೆಲೆಸುವಂತೆ ಮಾಡಲು ಕಾಲೇಜಿನ ಸಮಿತಿಯುಪ್ರಾಂಶುಪಾಲರಿಗೆ ಮನವಿಯನ್ನು ಅರ್ಪಿಸಿದೆ.

ನಾಗಲಾಪುರ ತಾಂಡಕ್ಕೆ ಎ. ಕೆ. ಜಿ. ಹೆಸರಿಡಲು ತೀರ್ಮಾನ

ಭಾರತದ ರೈತರ ಹೋರಾಟದ ಇತಿಹಾಸದಲ್ಲಿ ಎ ಕೆ ಗೋಪಾಲನ್ ಸ್ಥಾನ ಮಹತ್ವದ್ದಾಗಿದೆ. ಭೂಮಾಲಕ ಬಂಡವಾಳಶಾಹಿ ವ್ಯವಸ್ಥೆಯ ಸ್ವತಂತ್ರ ಭಾರತದ ಸುಧೀರ್ಘ ದಾರುಣ ಕಥೆಯಲ್ಲಿ ಪ್ರಜಾಸತ್ತೆಗಾಗಿ, ದುಡಿಯುವ ಜನತೆಯ ಅಖಂಡ ನ್ಯಾಯಕ್ಕಾಗಿ ಎ. ಕೆ ಗೋಪಾಲನ್ ತನ್ನ ಜೀವನವನ್ನೇ ತೇಯ್ದು ಪ್ರತಿಯೊಬ್ಬ ಹೋರಾಟಗಾರನಿಗೂ ಸ್ಫೂರ್ತಿಯ ಚಿಲುಮೆಯಾಗಿದ್ದಾರೆ. ಈ ಗ್ರಾಮಕ್ಕೆ ಇಂತಹ ಮಹಾನ್ ಹೋರಾಟಗಾರನ ಹೆಸರನ್ನು ಇಡುವುದಾಗಿ ಇಲ್ಲಿ ನಡೆದ ಬಹಿರಂಗ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಸಕ್ಕರೆ ಕಾರ್ಮಿಕರ ಸಭೆ

ಮಂಡ್ಯಜಿಲ್ಲೆ ಕಾಳಮುದ್ದನದೊಡ್ಡಿ, ಭಾರತಿ ನಗರದಲ್ಲಿರುವ ಶ್ರೀ ಚಾಮುಂಡೇಶ್ವರಿ ಷುಗರ್ ಮಿಲ್ಸ್ ಎಂಪ್ಲಾಯಿಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿ ಸಭೆಯು ಸಂಘದ ಅಧ್ಯಕ್ಷರಾದ ಕಾ. ಸಿದ್ದಲಿಂಗಸ್ವಾಮಿ ಯವರ ಅಧ್ಯಕ್ಷತೆಯಲ್ಲಿ ತಾ 30-6-84 ರಂದು ನಡೆಯಿತು. ಸಂಘದ ಸಲಹೆಗಾರರಾದ ಕಾ. ಎಂ. ಎನ್. ಉಗ್ರಪ್ಪನವರು ಉಪಸ್ಥಿತರಿದ್ದು ಸಭೆಗೆ ಮಾರ್ಗದರ್ಶನ ನೀಡಿದರ.

ದೊಡ್ಡಬಳ್ಳಾಪುರ

ನೇಕಾರರ ಹೋರಾಟಕ್ಕೆ ಜಯ

ಟೆಕ್ಸ್‌ಟೈಲ್ಸ್ ಅಂಡ್ ಜನರಲ್ ವರ್ಕರ್ಸ್ ಯೂನಿಯನ್ (ಸಿ. ಐ. ಟಿ. ಯು.) ದೊಡ್ಡ ಬಳ್ಳಾಪುರದಲ್ಲಿ ಕೆ. ಆರ್. ನಾರಾಯಣ್ (ರಾಜ ರಾಜೇಶ್ವರಿ ಟೆಕ್ಸ್‌ಟೈಲ್ಸ್) ಎಂಬ ಮಾಲೀಕರ ವಿರುದ್ಧ ಹೋರಾಟ ಮಾಡಿ ಈ ಕೆಳಕಂಡ ಸವಲತ್ತುಗಳನ್ನು ಪಡೆದುಕೊಂಡಿದೆ.

ಮೇಲ್ಕಂಡ ಈ ಮಾಲೀಕ ಕಾರ್ಮಿಕರಿಗೆ ಅತಿ ಕಡಿಮೆ ಕೂಲಿ ಅಂದರೆ ಒಂದು ಮೀಟರಿಗೆ ರೂ 1-30 ಪೈಸೆ ಕೊಡುತ್ತಿದ್ದ. 93 ಪವರ್ ಲೂಂಗಳನ್ನು ಈತ ಹೊಂದಿದ್ದರೂ ಕಾರ್ಮಿಕರಿಗೆ 0·5 ಪೈಸೆ ಕೂಲಿ ಹೆಚ್ಚು ಕೊಡುತ್ತಿರಲಿಲ್ಲ. ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ 200 ಜನ ಕಾರ್ಮಿಕರನ್ನು ಸಂಘಟಿಸಿ ಹೋರಾಟ ಮಾಡಲು ಯೂನಿಯನ್ ಯೋಚನೆ ಮಾಡಿ 6-7-84 ರಂದು ಮಾಲೀಕನ ಫ್ಯಾಕ್ಟರಿ ಮುಂದೆ ಧರಣಿ ಸತ್ಯಾಗ್ರಹ ಆರಂಭಿಸಿದರು. 7-7-84 ರಂದು ಧರಣಿಯನ್ನು ಪಿಕೆಟಿಂಗ್‌ಗೆ ಬದಲಾಯಿಸಿದಾಗ ಹೆದರಿದ ಮಾಲೀಕ ಮಾತುಕತೆಗೆ ಕಾರ್ಮಿಕ ನಾಯಕರನ್ನು ಕರೆದ. ಮಾತುಕತೆಯಲ್ಲಿ ಕಾರ್ಮಿಕರ ಸಂಪೂರ್ಣ ದುಸ್ಥಿತಿಯ ಚಿತ್ರವನ್ನು ಆತನಿಗೆ ಕೊಡಲಾಯಿತು. ಕೂಲಿಯನ್ನು 1·30 ಪೈಸೆ-(ಮೀಟರಿಗೆ)ಯಿಂದ ರೂ 1·90 ಪೈಸೆಗೆ ಏರಿಸಲಾಯಿತು. ಮುಂದೆ ಮುಂದೆ ಕಾರ್ಮಿಕರಿಗೆ ಬರಬೇಕಾದ ಎಲ್ಲಾ ಸವಲತ್ತುಗಳನ್ನು ಕಾರ್ಮಿಕರಿಗೆ ಕಾಲಕ್ರಮೇಣ ಕೊಡಬೇಕೆಂದು ಕಾರ್ಮಿಕ ನಾಯಕರುಗಳು ಒತ್ತಾಯಿಸಿದರು.

ಈ ಹೋರಾಟ ದೊಡ್ಡಬಳ್ಳಾಪುರದ ಕಾರ್ಮಿಕರಲ್ಲಿ ಒಂದು ಹೊಸ ಶಕ್ತಿಯನ್ನು ನೀಡಿದೆ. ಈ ಹೋರಾಟದ ಜಯ ಇನ್ನಷ್ಟು ಜನರನ್ನು ಸಂಘಟನೆಗೆ ತರಲು ಅವಕಾಶ ಮಾಡಿಕೊಟ್ಟಿದೆ. ಎರಡು ದಿನಗಳ ಈ ಹೋರಾಟದ ಸಂಪೂರ್ಣ ಜವಾಬ್ದಾರಿ ಹೊತ್ತಿದ್ದವರು ಯೂನಿಯನ್‌ನ ಕಾರ್ಯದರ್ಶಿ ಕಾ|| ಎಂ. ಕೃಷ್ಣಮೂರ್ತಿ, ಕಾ|| ಕೆ. ಎಸ್. ನಾರಾಯಣ ಸ್ವಾಮಿ, ಕಾ|| ಕೆ. ವೆಂಕಟಾಚಲಪತಿ.

ಪ್ರತೀಕ್ಷೆ

ನಮ್ಮ ದೇಶಕ್ಕೆ ಶಕ್ತಿ ಇದೆ, ಯೌವ್ವನದ ಕೆಚ್ಚಿದೆ,
ಈ ದೇಶದ ವೀರ ಗೀತೆಗಳಿನ್ನೂ ಉಕ್ಕಿ ಕೊನಲಾಗಿ ಹರಿದಿಲ್ಲ —
ಈ ದೇಶದಲ್ಲಿ ದಗಾ-ಮೋಸಗಳಿವೆ ಅರ್ಥವಿಲ್ಲದ ಚೀರಾಟ
ಕಿರಿಚಾಟಗಳು ತುಂಬಿಕೊಂಡಿವೆ.

ಖೂನಿ, ಅನ್ಯಾಯವಾಗಿ ಜನರನ್ನು ನೇಣು ಹಾಕಿ ಕೊಲ್ಲುವುದು
ಎಲ್ಲವೂ ಉಂಟು. ಪುಂಡ ಪುಡಾರಿಗಳು,
ಬಾಯಿಗೆ ಬಂದಂತೆ ಹರಟುವ
ದೇಶಭಕ್ತ ಸೂಳೇ ಮಕ್ಕಳುಗಳು ಇದ್ದಾರೆ,
ಆದರೆ.... ಈ ಎಲ್ಲಾ ಅನಿಶ್ಚಿತತೆಯು,
ಅನುಮಾನ ಗುಮಾನಿಗಳ ಬಸಿರೊಳಗಿಂದ ಬರುತ್ತದೆ...
ಬಂದೇ ಬರುತ್ತದೆ ನಾವು ಹಾಡುವ ಸಂಗೀತ....
ಜನಪ್ರಿಯ "ಮಟ್ಟೆ" ನಷ್ಟು ಸರಳವಾದ,
ನಮ್ಮ ಕಣಿವೆಗಳಷ್ಟು ಆಳವಾದ,
ನಮ್ಮ ಪರ್ವತಗಳಷ್ಟು ಉನ್ನತವಾದ,
ಆ ಹಾಡು ಕಟ್ಟಿದ ಕವಿಗಳಷ್ಟು ಪ್ರಬಲವಾದ
ಹಾಡು ಬಂದೇ ಬರುತ್ತದೆ.

ಮೂಲ : ಪಾಲ್ ರಾಬ್ಸನ್
(1946 ರಲ್ಲಿ ಬರೆದದ್ದು)
ಅನು : ಎಚ್. ಕೆ. ರಾಮಚಂದ್ರಮೂರ್ತಿ

(ಜಾರ್ಜ್ ಥಾಮ್ಸನ್‌ರ 'ಮಾರ್ಕ್ಸ್‌ವಾದ ಮತ್ತು ಕಾವ್ಯ' ಕೃತಿಯಿಂದ)

ಅಂತರ್ರಾಷ್ಟ್ರೀಯ

ಬೋಥಾನ ಯುರೋಪ್ ಯಾತ್ರೆ

ಜನಾಂಗೀಯ ಭೇದ ನೀತಿಯನ್ನು ಅನೂಚಾನವಾಗಿ ಅನುಸರಿಸುತ್ತಿರುವ ದಕ್ಷಿಣ ಆಫ್ರಿಕಾದ ಪ್ರಧಾನ ಮಂತ್ರಿ ಪಿಯಟರ್ ಭೋಥಾ ಇತ್ತೀಚೆಗೆ ಯುರೋಪ್ ಪ್ರವಾಸ ಕೈಗೊಂಡಾಗ ಪ್ರಜಾಸತ್ತಾತ್ಮಕ ಜನ ವಿಭಾಗದಿಂದ ಎಲ್ಲೆಡೆಯೂ ವಿರೋಧವನ್ನು ಎದುರಿಸಬೇಕಾಯಿತು. ಬ್ರಿಟನ್, ಫ್ರಾನ್ಸ್, ಪಶ್ಚಿಮ ಜರ್ಮನಿ, ಆಸ್ಟ್ರೇಲಿಯಾ ಗಳಿಗೆ ನೀಡಿದ ಭೇಟಿಯನ್ನು ಖಾಸಗೀ ಭೇಟಿಯೆಂದು ಹೇಳಿಕೊಂಡರೂ ಇದರ ಉದ್ದೇಶ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳೊಂದಿಗೆ ನೇರ ಸಂಪರ್ಕ ಪಡೆಯುವುದಾಗಿದೆ.

ಹೊಸ ಮುಖವಾಡ

ಶಾಂತಿ, ಸುಧಾರಣೆ ತರುವಲ್ಲಿ ತನಗೆ ಅಪರಿಮಿತ ವಿಶ್ವಾಸವಿರುವುದಾಗಿ ಜಗತ್ತನ್ನು ನಂಬಿಸಲು ಈ ಯಾತ್ರೆಯನ್ನು ಕೈಗೊಳ್ಳಲಾಯಿತು. ಇದಕ್ಕೆ ಪೂರಕವಾಗಿ ಹೊಸ ಸಂವಿಧಾನ ಮತ್ತು ಕೋಮಾತಿ ಶಾಂತಿ ಒಪ್ಪಂದಗಳನ್ನು ಜಗತ್ತಿಗೆ ತೋರಿಸಲಾಯಿತು ಇವುಗಳನ್ನು ಸರಿಯಾದ ದಿಕ್ಕಿನಲ್ಲಿ ಇಟ್ಟ ಹೆಜ್ಜೆಗಳೆಂದು ಹೊಗಳು ಭಟ್ಟರು ಹೇಳಿದರೂ, ಜನಾಂಗೀಯ ಭೇದ ನೀತಿಯನ್ನು ವ್ಯವಸ್ಥಿತ ಗೊಳಿಸುವುದರಲ್ಲಿ ಮಾತ್ರ ಸಹಕಾರಿಯಾಗಿವೆ. ಈ ಹೊಸ ಸಂವಿಧಾನವು ಪ್ರತ್ಯೇಕ ಕಮ್ಯೂನಿಟಿ ಜೀವನವನ್ನು ಒಳಗೊಂಡಿದೆ. ಅಲ್ಲದೆ ಬಹು ಸಂಖ್ಯಾತರ ಆಡಳಿತವನ್ನು ತಿರಸ್ಕರಿಸುತ್ತೇವೆಂದು ಪ್ರಧಾನಿ ಭೋಥಾ ಹೇಳಿದ್ದಾರೆ.

ಹತ್ಯಾಕಾಂಡ

ಈ ಹಿಂದಿನ ವೊರ್ಸ್ಟರ್ ನ ಆಡಳಿತಕ್ಕಿಂತ ಬೋಥಾನ ಆಡಳಿತ ಭಿನ್ನವಾಗಿಲ್ಲ. ಜನಾಂಗೀಯ ಭೇದ ನೀತಿಯನ್ನು ವಿರೋಧಿಸುವವರ ಸಾಮೂಹಿಕ ಹತ್ಯಾಕಾಂಡ ಮುಂದುವರೆದಿವೆ. ಲಕ್ಷಾಂತರ ಜನಗಳು ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ನೆಲ್ಸನ್ ಮಾಂಡೇಲಾ ಮತ್ತು ವಾಲ್ಟರ್ ಸಿಸುಲ 20 ವರ್ಷಗಳಿಂದಲೂ ಜೈಲುಗಳಲ್ಲಿದ್ದಾರೆ. ಈ ಕಾರಣದಿಂದಲೇ ಬೋಥಾ ಎಲ್ಲೆಲ್ಲೂ ವಿರೋಧ ಎದುರಿಸಬೇಕಾಗಿದೆ. ಬೋಥಾ ಬಹಿಷ್ಕಾರ ಚಳುವಳಿ ತೀವ್ರ ಗೊಂಡಿದೆ.

ಮುಸುಕಿನೊಳಗಿನ ಸಂಬಂಧ

ಬಂಡವಾಳಶಾಹಿ ದೇಶಗಳೊಡನೆ ದಕ್ಷಿಣ ಆಫ್ರಿಕದ ಸಂಬಂಧ ಗಾಢವಾದುದಾಗಿದೆ. ಏಕೆಂದರೆ ಬಹು ರಾಷ್ಟ್ರೀಯ ಕಂಪನಿಗಳು ದಕ್ಷಿಣ ಆಫ್ರಿಕಾದ ಜನಾಂಗೀಯ ಭೇದ ನೀತಿಯಿಂದಾಗಿ ಅಪಾರ ಲಾಭಗಳಿಸುತ್ತಿವೆ. ಫ್ರಾನ್ಸ್ ಈ ದೇಶದೊಂದಿಗೆ ಬೃಹತ್ ಪ್ರಮಾಣದ ವ್ಯಾಪಾರ ಸಂಬಂಧ ಹೊಂದಿದೆ. ಅಂತೆಯೇ ಬ್ರಿಟನ್, ಜರ್ಮನಿ, ಸ್ವಿಟ್ಜರ್ ಲ್ಯಾಂಡ್ ನೊಂದಿಗೆ ಸಂಭಂದಹೊಂದಿದೆ ಇದರಿಂದಾಗಿ ಇಂದಲ್ಲ ನಾಳೆಯಾದರೂ ಆರ್ಥಿಕ ಕಾರಣಗಳಿಂದಾಗಿ ಪಶ್ಚಿಮ ರಾಷ್ಟ್ರಗಳು ಬಹಿರಂಗವಾಗಿಯೇ ದಕ್ಷಿಣ ಆಫ್ರಿಕವನ್ನು ಬೆಂಬಲಿಸುವುದರಲ್ಲಿ ಸಂದೇಹವಿಲ್ಲ. ಮಾನವ ಹಕ್ಕುಗಳು ಸ್ವಾತಂತ್ಯ ಪ್ರಜಾಪ್ರಭುತ್ವ ಮುಂತಾದ ವಿಚಾರಗಳು ಬಂಡವಾಳ ಶಾಹಿಗಳಿಗೆ ಕೇವಲ ಕಣ್ಣೊರೆಸುವ ತಂತ್ರವಲ್ಲವೆ.

ಲಾಸ್ ಏಂಜಲೀಸ್‌ನಲ್ಲಿ ಮಾಫಿಯಾ ತಂಡಗಳು

ಲಾಸ್ ಏಂಜಲೀಸ್ ನಲ್ಲಿ ಒಲಿಂಪಿಕ್ ಪಂದ್ಯಗಳು ಪ್ರಾರಂಭವಾಗಲು ಇನ್ನು ಕೆಲವೇ ದಿನಗಳಿವೆ. ಅಷ್ಟರಲ್ಲಿ, ಒಲಿಂಪಿಕ್ ವಿರೋಧಿ ಪುಂಡರ ತಂಡಗಳ ಹಾವಳಿ ಪ್ರಾರಂಭವಾಗಿದೆ, ಅಮೇರಿಕಾದ ಸ್ಕೀ ಚಾಂಪಿಯನ್ ಡೊರೋಥಿ ಹಾಮಿಲ್ ಲಾಸ್ ಏಂಜಲೀಸ್ ನಲ್ಲಿ 1,50,000 ಡಾಲರ್‌ಗಳು ಬೆಲೆ ಬಾಳುವ ತನ್ನೆಲ್ಲಾ ವಸ್ತುಗಳನ್ನು ಕಳೆದು ಕೊಂಡಳು. ನಗರಕ್ಕೆ ಆಗಮಿಸಿದ ಕ್ರೀಡಾಪಟುಗಳಲ್ಲಿ ದರೋಡೆಗೀಡಾದ ಮೊದಲಿಗಳು ಈಕೆ ಎಂದು ತೋರುತ್ತದೆ.

ಕೆಲವು ದುಷ್ಟಪ್ರಯತ್ನಗಳು ತಿರುಗುಬಾಣವಾಗುತ್ತವೆ. ಸಮಾಜವಾದೀ ಜಗತ್ತಿನ ದೇಶಗಳಿಂದ ಬರುವ ಕ್ರೀಡಾಪಟುಗಳನ್ನು ಹಿಂಸಿಸಲು ಅಧೋಲೋಕದ ಪುಂಡತಂಡಗಳನ್ನು ಸಂಘಟಿಸಲಾಯಿತು. ಈಗ ಸಮಾಜವಾದೀ ದೇಶಗಳ ಕ್ರೀಡಾಪಟುಗಳು ಬಾರದಿದ್ದರೇನಂತೆ, ಯಾರಾದರೂ ಆದೀತು. ಪುಂಡರತಂಡಗಳವರಿಗೆ ಸೂರೆಮಾಡಲು, ಹಿಂಸಿಸಲು ಯಾರಾದರೇನಂತೆ, ಹೇಳಿ ಕೇಳಿ ಅವರು ಕೂಲಿ ಸಿಪಾಯಿಗಳಂತೆ, ಅವರಿಗೆ ಯಾವ ರಾಜಕೀಯವೂ ಇಲ್ಲ. ಸುಲಿಗೆ ಮಾಡಲು ಅವಕಾಶವಿದ್ದರೆ ಸಾಕು, ಹೊರಗಿನವರು ಯಾರೂ ಸಿಗದಿದ್ದರೆ, ಇರುವವರೇ ಆದರೂ ಸರಿಯೇ ಅವರಿಗೆ.

ಇನ್ನೊಂದು, ಇಂದು ಲಾಸ್ ಏಂಜಲೀಸ್‌ನಲ್ಲಿ 50,000 ಮಂದಿ ಸ್ಥಳೀಯ ಪುಂಡರಿದ್ದಾರೆ. ಒಲಿಂಪಿಕ್ ಪಂದ್ಯಗಳಿಂದಾಗಿ ಇವರ ಜೊತೆಗೆ ಜಪಾನ್, ಜರ್ಮನಿ ಹಾಗೂ ಇತರ ಪಾಶ್ಚಾತ್ಯ ದೇಶಗಳಿಂದಲೂ ಅಧೋಜಗತ್ತಿನ ಆಸಾಮಿಗಳು ಬಂದು ಸೇರಿದ್ದಾರೆ, ಪುಂಡಾಟಿಕೆಗೆ ಅಂತರ ರಾಷ್ಟ್ರೀಯ ಮೆರಗು ಕೊಡುವುದಕ್ಕೆ. ಒಲಿಂಪಿಕ್ ಪಂದ್ಯಗಳ ಸಮಯದಲ್ಲಿ ಹೇರಳ ಲಾಭ ಸಂಪಾದಿಸಲು ಅವರಿಗೆ ಅವಕಾಶವಿರುತ್ತದೆ. ಲೂಟಿ, ದರೋಡೆ ಜೊತೆಗೆ, ಮಾದಕ ದ್ರವ್ಯಗಳ ಮಾರಾಟ, ಜೂಜು ಸೂಳೆಗಾರಿಕೆ – ಎಲ್ಲ ರೀತಿಯಿಂದಲೂ ಸಂಪಾದಿಸಬಹುದು

ಆಸ್ಟ್ರಿಯಾದ 'ಮೀಮರ್ ಜೀತುಂಗ್' ಪತ್ರಿಕೆಯ ಬಾತ್ಮೀದಾರ ಇತ್ತೀಚೆಗೆ ಲಾಸ್ ಏಂಜಲೀಸ್‌ಗೆ ಭೇಟಿನೀಡಿದ್ದರು. ಒಲಿಂಪಿಕ್ಸ್‌ಗೆ ಬರುವವರು ಜೀವದಿಂದ ವಾಪಸು ಹೋಗಬೇಕೆಂದಿದ್ದರೆ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸಿಗಳಂತೆ ಹೋಗಬೇಡಿ ಎಂದು ಅವರು ಹೇಳಿದ್ದಾರೆ.

ಲಾಸ್ ಏಂಜಲೀಸ್‌ನಲ್ಲಿ ಜಪಾನೀ ಮಾಫಿಯಾ ತಂಡದವರ ಚಟುವಟಿಕೆಗಳನ್ನು ಹತೋಟಿಯಲ್ಲಿರಿಸಲು ಬಂದಿರುವ ವಿಶೇಷ ವಿಭಾಗದ ಅಧಿಕಾರಿ ಜಿಮ್ಮಿ ಸಕೋಟಾರವರು "ಅವರ ಚಟುವಟಿಕೆಗಳನ್ನು ತಡೆಯಲು ನಮಗೆ ಈಗ ಸಾಧ್ಯವಿರುವಂತೆ ತೋರುತ್ತಿಲ್ಲ" ಎಂದು ಹೇಳಿದ್ದರೆ.

ಒಲಿಂಪಿಕ್ಸ್ ನಡೆಯುವ ಸಮಯದಲ್ಲಿ ಮಾಫಿಯಾ ತಂಡಗಳ ಮಧ್ಯೆ ಘರ್ಷಣೆಗಳನ್ನು ತಪ್ಪಿಸಲು ಪರಸ್ಪರ ಕಾರ್ಯಾಚರಣೆ ಕ್ಷೇತ್ರ ಅತಿಕ್ರಮಿಸದಂತೆ ನೋಡಿಕೊಳ್ಳಲು ಜಪಾನೀ ಮಾಫಿಯಾ ತಂಡಗಳ ನಾಯಕರು ಅಮೆರಿಕದ ಪುಂಡರ ನಾಯಕರನ್ನು ಸಂಪರ್ಕಿಸಿದ್ದಾರೆ ಎಂದು ಜಿಮ್ಮಿ ಸಕೋಟಾ ಹೇಳಿದ್ದಾರೆ. ಒಲಿಂಪಿಕ್ ಸಮಯದಲ್ಲಿ ಲೂಟಿ ಹೊಡೆಯಲು ಪೋಟಿ ನಡೆಸುತ್ತಿರುವ ಗ್ಯಾಂಗ್‌ಗಳ ನಡುವೆ ಈಗ ಪ್ರಾರಂಭವಾಗಿರುವ ಘರ್ಷಣೆಗಳ ಹಿನ್ನೆಲೆಯಲ್ಲಿ ವ್ಯವಹಾರ ಕುದುರಿಸುವ ಪ್ರಯತ್ನ ನಡೆಯುತ್ತಿದೆ ಎಂದು ತಿಳಿದು ಬಂದಿದೆ. ಲಾಸ್ ಏಂಜಲೀಸ್‌ಗೆ ಇತ್ತೀಚೆಗೆ ಆಗಮಿಸಿದ್ದ ಜಪಾನೀ ಮಾಫಿಯಾ ತಂಡದ ನಾಯಕನ ಕೊಲೆಯಾಯಿತು. ಪೋಲೀಸರು ಮೃತ ದೇಹವನ್ನು ವಶಪಡಿಸಿ ಕೊಂಡಿದ್ದಾರೆ.

ಇಷ್ಟೆಲ್ಲಾ ಭಯಂಕರ ವಾತಾವರಣವಿದ್ದರೂ ರೇಗನ್‌ರವರು ಮಾತ್ರ ತಮ್ಮ ಸ್ವತಂತ್ರ ಸಮಾಜದಲ್ಲಿ ಇಂತಹ ಪುಂಡ ತಂಡಗಳ ಚಟುವಟಿಕೆಗಳನ್ನು ಹತೋಟಿಯಲ್ಲಿರಿಸುವುದು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಹಾಗಿದ್ದರೆ ಒಲಿಂಪಿಕ್‌ಗೆ ಬರುವವರ ರಕ್ಷಣೆಗೆ ಭರವಸೆ ಎಲ್ಲಿದೆ ?

— ಎ. ಎಸ್. ಮೂರ್ತಿ

ಶಿವಮೊಗ್ಗ

ಅಕ್ಕಿ ಗಿರಣಿ ಕಾರ್ಮಿಕರ ಮುಷ್ಕರ ರದ್ದು

ಅಕ್ಕಿ ಗಿರಣಿ ಕೆಲಸಗಾರರ ಮತ್ತು ಹಮಾಲಿ ಕಾರ್ಮಿಕ ಸಂಘದ ಪ್ರತಿನಿಧಿಗಳು ಹಾಗೂ ಅಕ್ಕಿ ಗಿರಣಿ ಮಾಲೀಕರ ಸಂಘದ ಪ್ರತಿನಿಧಿಗಳು ಸೇರಿ ಕಾರ್ಮಿಕರ ಬೇಡಿಕೆಗಳ ಬಗ್ಗೆ ಶಿವಮೊಗ್ಗ ಕಾರ್ಮಿಕಧಿಕಾರಿಗಳ ಸಮ್ಮುಖದಲ್ಲಿ 6-7-84 ಮತ್ತು 9-7-84 ತಾರೀಖುಗಳಲ್ಲಿ ಸುಧೀರ್ಘ ಚರ್ಚೆ ನಡೆಸಿ ತಾ : 9-7-84ರಂದು ಕೂಲಿದರ ಹೆಚ್ಚಿಸಿ ಒಂದು ಒಪ್ಪಂದಕ್ಕೆ ಬಂದುದರಿಂದ ತಾ : 9-7-84 ರ ಕೈ ಬಿಡಲಾಗಿದೆ. ಮುಷ್ಕರ ನಿರ್ಧಾರವನ್ನು ಕಾರ್ಮಿಕ ಸಂಘದ ಪರವಾಗಿ ಅಧ್ಯಕ್ಷ ಕಾ : ಬಿ. ಶಿವುಕಪ್ಪ, ಉಪಾಧ್ಯಕ್ಷರುಗಳಾದ ಶ್ರೀ ಹೆಚ್. ನಾಗಪ್ಪ ಹಾಗೂ ಶ್ರೀ ಕಾಸಿಂ ಸಾಬ್ ಮತ್ತು ಕಾರ್ಯದರ್ಶಿಯಾದ ಕಾ : ಕೆ. ಚಂದುಕುಟ್ಟಿ ಇವರುಗಳೂ ಮತ್ತು ಮಾಲೀಕರ ಸಂಘದ ಪ್ರತಿನಿಧಿಗಳಾಗಿ ಅಧ್ಯಕ್ಷ ಶ್ರೀ ಆರ್. ಎಸ್. ಅಶ್ವಥ ನಾರಾಯಣ, ಉಪಾಧ್ಯಕ್ಷ ಶ್ರೀ ಎನ್. ಹೆಚ್. ಚಿನ್ನವೀರಪ್ಪ ಮತ್ತು ಸಲಹೆಗಾರರಾದ ಶ್ರೀ ಜಿ. ಹಿ. ಆರ್. ಮಾನ್ ಇವರುಗಳು ಚರ್ಚೆಯಲ್ಲಿ ಭಾಗವಹಿಸಿದರು.

ಕಾರ್ಮಿಕರ ಬೇಡಿಕೆಗಳ ಬಗ್ಗೆ ನಡೆದ ಹೋರಾಟದ ಅಂಗವಾಗಿ ತಾ : 30-6-84 ರಂದು ನಗರದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ ಕಾರ್ಮಿಕರಿಗೂ ಮತ್ತು ಹಿತೈಷಿಗಳಿಗೂ ಕಾರ್ಮಿಕರ ಸಂಘ ಕೃತಜ್ಞತೆಯನ್ನು ಅರ್ಪಿಸಿದೆ.

ಸಕ್ಕರೆ ಕಾರ್ಮಿಕರ ಸಭೆ

ಮಂಡ್ಯ ಜಿಲ್ಲೆ ಕಾಳಮುದ್ದದೊಡ್ಡಿ ಭಾರತಿ ನಗರದಲ್ಲಿರುವ ಶ್ರೀ ಚಾಮುಂಡೇಶ್ವರಿ ಷುಗರ್ ಮಿಲ್ಸ್ ಎಂಪ್ಲಾಯೀಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿ ಸಭೆಯು ಸಂಘದ ಅಧ್ಯಕ್ಷರಾದ ಕಾ ಸಿದ್ದಲಿಂಗಸ್ವಾಮಿ ಯವರ ಅಧ್ಯಕ್ಷತೆಯಲ್ಲಿ ತಾ-30-6-84ರಂದು ನಡೆಯಿತು. ಸಂಘದ ಸಲಹೆಗಾರರಾದ ಕಾ. ಎಂ. ಎನ್ ಉಗ್ರಪ್ಪನವರು ಉಪಸ್ಥಿತರಿದ್ದು ಸಭೆಗೆ ಮಾರ್ಗದರ್ಶನ ನೀಡಿದರು.

ಷುಗರ್ ಮಿಲ್ಲಿನ ಮಾಲಕ ವರ್ಗ, ಕಾರ್ಮಿಕರಿಗೆ ಕೊಡಬೇಕಾಗಿರುವ ವೈದ್ಯಕೀಯ ಭತ್ಯ ಶೇಕಡ 5 ಮುಂಗಡ ಹಣ ಮತ್ತು ಸಮವಸ್ತ್ರಗಳನ್ನು ಪಡೆಯಲು ಮಾರ್ಚ್ ತಿಂಗಳಲ್ಲಿ ಧರಣಿ ಸತ್ಯಾಗ್ರಹ ನಡೆಸಿ ಮಾಲಕರ ಮೇಲೆ ಒತ್ತಾಯ ತರಲು ಚಳುವಳಿ ನಡೆಸಿದ ಪರಿಣಾಮವಾಗಿ ಮಂಡ್ಯ ಲೇಬರ್ ಆಫೀಸರ್ ರವರ ಸಮ್ಮುಖದಲ್ಲಿ ಆದ ಒಪ್ಪಂದದ ಪ್ರಕಾರ ಈ ಮೇಲ್ಕಂಡ ಮೊಬಲಗುಗಳನ್ನೂ ಸಮವಸ್ತ್ರಗಳನ್ನೂ ಕಾರ್ಖಾನೆ ಕಬ್ಬು ಅರೆಯುವುದನ್ನು ಪ್ರಾರಂಭಿಸಿದ ಒಂದು ತಿಂಗಳಿಗೆ ಸರಿಯಾಗಿ ಕೊಡುವುದಾಗಿ ಒಪ್ಪಂದಕ್ಕೆ ಬಂದಿದ್ದರು.

ಆದರೆ ಆಡಳಿತವರ್ಗ ವೈದ್ಯಕೀಯ ಭತ್ಯವನ್ನು 2-7-84 ರಂದು, ಮುಂಗಡ ಹಣವನ್ನು 14-7-84 ರಂದು, ಸಮವಸ್ತ್ರಗಳನ್ನು ಅಕ್ಟೋಬರ್ ತಿಂಗಳಲ್ಲಿ ಕೊಡುವುದಾಗಿ ಹೇಳಿರುವುದನ್ನು ಸಮಿತಿಯು ನಿರಾಕರಿಸಿ 9-7-84 ರ ಒಳಗೆ ಎಲ್ಲ ಹಣವನ್ನು ಕಾರ್ಮಿಕರಿಗೆ ಪಾವತಿ ಮಾಡದಿದ್ದಲ್ಲಿ 10-7-84 ರಿಂದ ಸಂಘದ ಪದಾಧಿಕಾರಿಗಳು ನಿರಂತರ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸುವುದಾಗಿ ಮಾಲಿಕರಿಗೆ ತಿಳಿಸಲಾಗಿದೆ.

ಸಿಂಧನೂರಿನಲ್ಲಿ ರೈತ ಸಮ್ಮೇಳನ

ರಾಯಚೂರ ಜಿಲ್ಲೆಯ ಸಿಂಧನೂರ ತಾಲೂಕ್ ರೈತ ಸಂಘದ ಸಮಾವೇಶ ಜುಲೈ 2ರಂದು ಸಿಂಧನೂರಲ್ಲಿ ಸೇರಿತ್ತು. ಬಸವರಾಜಪ್ಪ ಮಾಲಿಪಾಟೀಲರು ಅಧ್ಯಕ್ಷತೆಯಲ್ಲಿ, ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಭೀಮಸಿ ಕಲಾದಗಿಯವರು ಸಮ್ಮೇಳನದ ಉದ್ಘಾಟನೆ ಮಾಡಿದರು. ಜನತಾ ಪಕ್ಷದ ಅಧ್ಯಕ್ಷರಾದ ಕನ್ನೂರಿ ದೊಡ್ಡನಗೌಡ ವಕೀಲರು ಆಗಮಿಸಿದ್ದರು. ವಿದ್ಯಾರ್ಥಿ ಫೆಡರೇಶನ್, ಯುವ ಜನ ಫೇಡರೇಶನ್, ಕೃಷಿ ಕಾರ್ಮಿಕ ಸಂಘ, ಬ್ಯಾಂಕ್ ನೌಕರರ ಸಂಘಗಳ ಪ್ರತಿನಿಧಿಗಳು ಶುಭ ಕೋರಿ ಮಾತಾಡಿದರು.

(8ನೇ ಪುಟ ನೋಡಿ)

ದೇಶದ ಸಮಗ್ರತೆಗಾಗಿ ರಕ್ತ ಸುರಿಸಲೂ ನಮ್ಮ ಪಕ್ಷ ಸಿದ್ಧ

(1ನೇ ಪುಟದಿಂದ)

ವಿಯಟ್ನಾಂನಿಂದ ಪಾಠ ಕಲಿಯದ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಇಡೀ ವಿಶ್ವವನ್ನೇ ಯುದ್ಧ ರಂಗ ಮಾಡಲು ಹವಣಿಸುತ್ತಿದ್ದಾರೆ. ಹಿಂದೂ ಮಹಾ ಸಾಗರ ಪ್ರದೇಶದಲ್ಲಿ ಯುದ್ಧ ಸಿದ್ಧತೆಗಳನ್ನು ಅವರು ಭಯಾನಕ ಯುದ್ಧೋಪಕರಣಗಳನ್ನು ತಯಾರಿಸ ಲಾಗುತ್ತಿದೆ. ಕಳೆದ 10-15 ವರ್ಷ ಗಳಿಂದ ವಿದೇಶಿ ಶಕ್ತಿಗಳ ಕುಮ್ಮಕ್ಕಿ ನಿಂದ ಉತ್ತರ ಭಾರತದ ಗಡಿ ರಾಜ್ಯ ಗಳಲ್ಲಿ ಛಿದ್ರಕಾರಿ ಚಟುವಟಿಕೆಗಳು ನಡೆಯುತ್ತಿವೆ.

ಶ್ರೀಮತಿ ಇಂದಿರಾಗಾಂಧಿ ಅವರು ಪ್ರಜಾಸತ್ತಾತ್ಮಕವಾಗಿ ಚುನಾಯಿತ ವಾದ ಸರ್ಕಾರಗಳನ್ನ ವಜಾ ಮಾಡುತ್ತ ಛಿದ್ರಕಾರಿ ಶಕ್ತಿಗಳು ಬೆಳೆಯುವುದಕ್ಕೆ ಅನುಕೂಲ ಕೊಡುತ್ತಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಫಾರೂಕ್ ಅಬ್ದುಲ್ಲಾ ಸರ್ಕಾರ ವಜಾ ಮಾಡಲು ನವದೆಹಲಿಯಲ್ಲಿ ಷಡ್ಯಂತ್ರ ಗಳನ್ನು ರೂಪಿಸಲಾಗಿತ್ತು. ಜಮ್ಮು ಮತ್ತು ಕಾಶ್ಮೀರದ 12 ಜನ ಶಾಸಕರು ಫಾರೂಕ್ ಅವರಿಗೆ ತಮ್ಮ ಬೆಂಬಲ ವಾಪಾಸ್ ಪಡೆಯುವುದಕ್ಕೆ ಬಹಳ ಮುಂಚಿತವಾಗಿ ನೆರೆ ರಾಜ್ಯಗಳಿಂದ ಎರಡು ವಿಮಾನಗಳಲ್ಲಿ ಸೇನೆಯನ್ನು ತರಿಸಲಾಗಿತು. ಫಾರೂಕ್ ಸರಕಾರ ವನ್ನು ಹೇಗಾದರೂ ವಜಾ ಮಾಡಲೇ ಬೇಕೆಂಬ ನಿರ್ಣಯಕ್ಕೆ ಬಂದಿದ್ದ ಕೇಂದ್ರ ಸರ್ಕಾರ ಈ ಹಿಂದೆ ರಾಜ್ಯದಲ್ಲಿ ಶಾಂತಿಗೆ ಅಸ್ಥಿರತೆ ಉಂಟು ಮಾಡುವ ಪ್ರಯತ್ನ ನಡೆಸಿತ್ತು. ಆದರೆ ಹಿಂದಿನ ರಾಜ್ಯಪಾಲ ಬಿ. ಕೆ. ನೆಹರೂರವರ ಸಲಹೆಯು ಸರ್ಕಾರವನ್ನು ವಜಾ ಮಾಡುವ ತಂತ್ರವನ್ನು ವಿಫಲಗೊಳಿ ಸಿತು. ಆದಕ್ಕಾಗಿ ಇಂದಿರಾ ಅವರು ತನ್ನ ಕೈ ಗೊಂಬೆ ಜಗಮೋಹನ್ ಅವ ರನ್ನು ರಾಜ್ಯಪಾಲರಾಗಿ ನೇಮಿಸಿದರು. ಜಗಮೋಹನ್ ಅವರು ತಮ್ಮ ಪಾತ್ರ ಚೆನ್ನಾಗಿ ನಿರ್ವಹಿಸಿದರು. ಜಮ್ಮು ಮತ್ತು ಕಾಶ್ಮೀರದ ಜನತೆ ಚುನಾಯಿ ಸಿದ ಸರ್ಕಾರವನ್ನು ಉರುಳಿಸಲಾಯಿತು ಹಿಂದೆಂದೂ ಪ್ರಜಾ ಪ್ರಭುತ್ವದ ಕಗ್ಗೊಲೆ ಹೀಗೆ ಆಗಿದ್ದಿಲ್ಲ.

ಆದರೆ ಇಂಡಿಯಾ ಇಂದಿರಾಗಾಂಧಿ ಯವರದಲ್ಲ. 70 ಕೋಟಿ ಜನ ಭಾರ ತೀಯರದು. ದೇಶದ ಸಮಗ್ರತೆಗೆ ಕೆಲಸ ಮಾಡಿದರೆ ಇಡೀ ದೇಶದ ಜನತೆ ನಿಮ್ಮೊಂದಿಗಿದ್ದಾರೆಂದು ಕಾಶ್ಮೀರದ ಜನತೆಗೆ ನಾವಿಂದೂ ಘಂಟಾಘೋಷ ವಾಗಿ ಹೇಳುತ್ತೇವೆ.

ಇಂದು ಪಂಜಾಬ್‌ನಲ್ಲಿ ಏನು ನಡೆ ಯುತ್ತಿದೆ? ಸಿಖ್ಖರ ಮಧ್ಯೆ ಇವತ್ತು ನಾವು ಈ ದೇಶದವರೇ ಎನ್ನುವ ಪ್ರಶ್ನೆ ಬರ್ತಾ ಇದೆ. ಶ್ರೀಮತಿ ಇಂದಿರಾ ಗಾಂಧಿಯವರು ಪಂಜಾಬ್ ಕುರಿತು ಬಿಡುಗಡೆ ಮಾಡಿರುವ ಶ್ವೇತಪತ್ರದಲ್ಲಿ ಪಂಜಾಬ್ ಸಮಸ್ಯೆ ಬಗೆಹರಿಸುವಲ್ಲಿ ನಡೆದ ತ್ರಿಪಕ್ಷೀಯ ಸಭೆಗಳ ಚರ್ಚೆ ಮತ್ತು ವಿರೋಧ ಪಕ್ಷಗಳ ಪ್ರಯತ್ನ ಗಳ ಬಗ್ಗೆ ದಾಖಲೆಯಿಲ್ಲ. ಅಮೇರಿ ಕನ್ ಸಾಮ್ರಾಜ್ಯಶಾಹಿ ಪಿತೂರಿಗಳ ಬಗ್ಗೆ ಸ್ಪಷ್ಟಪಡಿಸಿಲ್ಲ. ಹೀಗಾಗಿ ಶ್ವೇತಪತ್ರ ಅಪೂರ್ಣವಾಗಿದ್ದು ಜನತೆ ಯನ್ನು ತಪ್ಪುದಾರಿಗೆ ಕೊಂಡೊಯ್ಯು ವಂತಿದೆ.

ಚಂಡೀಗಢ ಪಂಜಾಬಿಗೆ, ಹರಿಯಾ ಣಕ್ಕೆ ಕೆಲವು ಪ್ರದೇಶಗಳನ್ನು ಬಿಟ್ಟು ಕೊಟ್ಟು ಪಂಜಾಬ್ ಸಮಸ್ಯೆ ಬಗೆ ಹರಿ ಸುವ ಬಗ್ಗೆ ಅಕಾಲಿದಳ ಸೇರಿದಂತೆ ವಿರೋಧ ಪಕ್ಷಗಳು ಇಟ್ಟಿದ್ದ ಬೇಡಿಕೆ ಗಳನ್ನು ಈಡೇರಿಸಿ ಎಂದೋ ಪರಿಹರಿಸ ಬೇಕಾಗಿದ್ದ ಸಮಸ್ಯೆಯನ್ನು ಇಂದಿರಾ ಗಾಂಧಿಯವರು ನೆನೆಗುದಿಗೆ ಬಿಟ್ಟರು. ಸಮಸ್ಯೆಗಳನ್ನು ತಮ್ಮ ವೈಯುಕ್ತಿಕ ಲಾಭಗಳಿಗೆ ಉಪಯೋಗಿಸಿಕೊಳ್ಳಲೆತ್ನಿ ಸಿದರು. 1975 ಕ್ಕೆ ಮೊದಲು ಸಾಮಾನ್ಯ ವ್ಯಕ್ತಿಯಾಗಿದ್ದ ಮತ್ತು ಮಾತನಾಡಲೂ ಬರದಂತಹ ಭಿಂದ್ರನ್ ವಾಲೆ ಯನ್ನು ಸಂಜಯಗಾಂಧಿ ಬೆಳ ಕಿಗೆ ತಂದು ಅಕಾಲಿಗಳ ವಿರುದ್ಧ ಎತ್ತಿ ಕಟ್ಟಿದರು.

ಅಕಾಲಿಗಳ ಕೊಲೆಗೈಯಲು ಪ್ರಾರಂ ಭಿಸಿದ ಆತನನ್ನು 1979 ರಲ್ಲಿ ಅಕಾಲಿ ದಳದಿಂದ ಹೊರ ಹಾಕ ಲಾಯಿತು. (ಇಂತಹ ಅನೇಕ ಪ್ರಸಂಗಗಳಲ್ಲಿ ಸರ್ಕಾರ ಅವನನ್ನು ಬಂಧಿಸಿ ಬಿಡುಗಡೆ ಮಾಡುವ ನಾಟಕ ಮಾಡುತ್ತಲೇ ಇತ್ತು) ಕೇವಲ ಐದಾರು ನೂರು ಜನ ರಿಂದ ಪ್ರಾರಂಭವಾದ ಉಗ್ರಗಾಮಿ ಚಳವಳಿಗೆ ಪಂಜಾಬಿಗಳು ಅಸಂತೋಷ ವ್ಯಕ್ತಪಡಿಸಿದ್ದರು. ಆದರೆ ಪಾನಿ ಪತ್‌ನಲ್ಲಿ ಗುರುದ್ವಾರ ಸುಟ್ಟುಹಾಕಿ ಸಿಖ್ಖರಿಗೆ ವಿವಿಧ ರೀತಿಯಲ್ಲಿ ಅಪಮಾನ ಗೊಳಿಸುವುದು ಆರಂಭವಾದ ನಂತರ ಉಗ್ರಗಾಮಿಗಳು ಬೆಳೆದರು.

ಡಿಸೆಂಬರ್ 1983 ರವರೆಗೆ ಭಿಂದ್ರ ನ್‌ವಾಲೆ ಮತ್ತು ಸಂಗಡಿಗರು ಸ್ವರ್ಣ ಮಂದಿರವನ್ನು ಪ್ರವೇಶಿಸಿರಲಿಲ್ಲ. ಆದಕ್ಕೂ ಮೊದಲು ಕೇಂದ್ರ ಪ್ರಯತ್ನಿ ಸಿದ್ದರೆ ಪಂಜಾಬಿನಲ್ಲಾದ ಅನಾಹುತ ತಪ್ಪಿಸ ಬಹುದಿತ್ತು. ಆದರೆ ಇಂದು ಎಲ್ಲದಕ್ಕೂ ಅಕಾಲಿಗಳನ್ನೇ ಕಾರಣ ಕರ್ತರನ್ನಾಗಿ ಮಾಡಲಾಗುತ್ತಿದೆ. ಕಾಂಗ್ರೆಸ್‌ನಲ್ಲಿ ಜಾತ್ಯಾತೀತತೆ ಎಂಬುದು ಬಲಿಪಶುವಾಗಿದೆ.

ಪಂಜಾಬ್ ಸಮಸ್ಯೆ ಬಗೆಹರಿಸಲು ಈಗಲು ಸಾಧ್ಯವಿದೆ. ಆದರೆ ಮೊದಲು ಸ್ವರ್ಣಮಂದಿರದಿಂದ ಸೈನ್ಯವನ್ನು ವಾಪಸ್ ಕರೆಯಿಸಿ ಮಂದಿರ ಸಮಿತಿಗೆ ಅದನ್ನು ಬಿಟ್ಟು ಕೊಡಬೇಕು.

ದೇಶದ ಸಮಗ್ರತೆಯನ್ನು ಐಕ್ಯತೆ ಯನ್ನು ಉಳಿಸಿಕೊಳ್ಳಲು, ಹಿಂದು ಳಿದವರ, ಅಲ್ಪಮತಸ್ಥರನ್ನು ರಕ್ಷಿ ಸಲು ನಮ್ಮ ಪಕ್ಷ ರಕ್ತ ಸುರಿಸಲು ಸಿದ್ಧ ವಾಗಿದೆ, ಜೀವ ಕೊಡಲು ತಯಾರಾ ರಿದೆ. ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಪಡಿಸಲು ನಾವೆಲ್ಲ ಹೋರಾಡೋಣ ಎಂದು ಹೇಳಿದಾಗ ಇಡೀ ಸಭಾಂಗಣ ಸಭಿಕರ ಉತ್ಸಾಹದಾಯಕ ಪ್ರತಿ ಕ್ರಿಯೆ ಯಿಂದ ತುಂಬಿಹೋಯಿತು.

ಸಭೆಯ ಅಧ್ಯಕ್ಷತೆಯನ್ನು ಕಾ. ಎಸ್. ಸೂರ್ಯನಾರಾಯಣರಾವ್ ವಹಿ ಸಿದ್ದರು. ಕಾರ್ಯಕ್ರಮದ ಪ್ರಾರಂಭ ದಲ್ಲಿ ಕಾ. ಪಿ. ರಾಮಚಂದ್ರ ರಾವ್ ಅವರು ಜಮ್ಮು ಕಾಶ್ಮೀರದ ಸರ್ಕಾರ ವನ್ನು ಉರುಳಿಸಿದ್ದನ್ನು ಖಂಡಿಸಿ ಮಾತ ನಾಡಿದರು.

(7ನೇ ಪುಟದಿಂದ)

ತಾಲೂಕ್ ಸಮಿತಿ ಸಂಚಾಲಕರಾದ ಬಿ ಲಿಂಗಪ್ಪನವರು ವರದಿ ಮಂಡಿಸಿದ ನಂತರ 15 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. 20 ಗ್ರಾಮಗಳಿಂದ 142 ಪ್ರತಿನಿಧಿಗಳು ಸಮ್ಮೇಳನಕ್ಕೆ ಆಗ ಮಿಸಿದ್ದರು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಚಂದ್ರಶೇಖರ ಬಾಳೆಯ ವರು ಸಮ್ಮೇಳನವನ್ನುದ್ದೇಶಿಸಿ ಕಾಂಗ್ರೆಸ್ ಸರಕಾರದ ಆರ್ಥಿಕ ನೀತಿ ಯನ್ನು ಖಂಡಿಸಿ, ರೈತರ ಮೂಲಭೂತ ಸಮಸ್ಯೆಗಳ ಪರಿಹಾರವಾಗ ಬೇಕಾದರೆ ಕಾರ್ಮಿಕ ನಾಯಕತ್ವದಲ್ಲಿ ರೈತ-ಕೃಷಿ ಕಾರ್ಮಿಕರೆಲ್ಲ ಒಂದಾಗಿ ಹೋರಾಡ ಬೇಕೆಂದೂ, ದುಡಿಯುವ ಜನತೆಯ ಅಧಿಕಾರ ಸ್ಥಾಪಿಸಬೇಕೆಂದೂ ಹೇಳಿ ದರು.

ಅತಿ ಹೆಚ್ಚು ಸಂಖ್ಯೆಯಲ್ಲಿ ಮಹಿಳೆ ಯರನ್ನೊಳಗೊಂಡಿದ್ದ ರೈತರ ಮೆರವ ಣಿಗೆ ಹೊರಡಿಸಲಾಗಿತ್ತು. ಸಂಜೆ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಚಂದ್ರಶೇಖರ ಬಾಳೆಯವರು ವಹಿಸಿ ದ್ದರು. ಭೀಮಸಿ ಕಲಾದಗಿ ಬಸವರಾಜ ಮಾಳಿ ಪಾಟೀಲ ಮತ್ತು ಬಿ. ಲಿಂಗಪ್ಪ ನವರು ಭಾಷಣ ಮಾಡಿದರು.

ಪಿಕ್ ಅಪ್ ಡ್ಯಾಮುಗಳ ಕೆಲಸ ತೀವ್ರಗೊಳಿಸುವುದು, ಹೆಚ್ಚುವರಿ ಗೈ ರಾಣಿ ಭೂಮಿಯನ್ನು ಭೂಹೀನರಿಗೆ ಹಂಚುವುದು, ಗ್ರಾಮ ಪ್ರದೇಶಗಳಿಗೆ ರಸ್ತೆ, ಬಸ್ ಸೌಕರ್ಯ ಒದಗಿಸುವುದು ಮೊದಲಾದ ನಿರ್ಣಯಗಳನ್ನು ಪಾಸು ಮಾಡಲಾಯಿತು.

ಬಸವರಾಜಪ್ಪ ಮಾಳಿ ಪಾಟೀಲ, ಅಧ್ಯಕ್ಷ, ವೆಂಕನಗೌಡ್ರು, ಜಿ. ಈರಪ್ಪ, ಅಮರೇಶ ಉಪಾಧ್ಯಕ್ಷ, ಲಿಂಗಪ್ಪ ಪ್ರ ಕಾರ್ಯದರ್ಶಿ, ಯಮನಪ್ಪ, ದುರು ಗಪ್ಪ, ಹನುಮಂತಪ್ಪನವರು ಉಪ ಕಾರ್ಯದರ್ಶಿಗಳಾಗಿಯೂ, ಶಂಕರಪ್ಪ ಕೋಶಾಧಿಕಾರಿಯಾಗುಳ್ಳ ತಾಲೂಕ್ ಸಮಿತಿ ರಚಿಸಲಾಯಿತು.

ಶಂಕರ, ಬಸವರಾಜ ಮತ್ತು ಐಯ್ಯನ ಗೌಡರನ್ನೊಳಗೊಂಡಿದ್ದ ಅಧ್ಯಕ್ಷೀಯ ಮಂಡಳಿ ಸಮ್ಮೇಳನದ ಕಾರ್ಯಕಲಾ ಪಕ್ಕೆ ಮಾರ್ಗದರ್ಶನ ನೀಡಿತು.

(1ನೇ ಪುಟದಿಂದ)

ತನ್ನ ಎಲ್ಲಾ ಶಕ್ತಿಯಿಂದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಈ ಕ್ರಮವನ್ನು ವಿರೋಧಿಸುತ್ತದೆ. ಮತ್ತು ರಾಜ್ಯಪಾಲರ ಮತ್ತು ಭಾರತ ಸರಕಾರದ ಈ ಸರ್ವಾಧಿಕಾರಿ ಕ್ರಮದ ವಿರುದ್ಧ ಕರ್ನಾಟಕದ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಲು ಶಕ್ತಃ ಪ್ರಯತ್ನ ಮಾಡು ತ್ತದೆ. ಇಂದಿರಾಗಾಂಧಿ ಪಾಠ ಕಲಿಯಲಿಲ್ಲ, ಜನತೆ ಮಾತ್ರ ಅವಳಿಗೆ ಪಾಠ ಕಲಿಸಲು ಶಕ್ತರು.

ಕಾಂಗ್ರೆಸ್ (ಐ) ಸರಕಾರವನ್ನು 1983 ರಲ್ಲಿ ಪ್ರಪ್ರಥಮವಾಗಿ ಅಧಿಕಾರದಿಂದ ಕೆಳಗಿಳಿಸಿ ಚಾರಿತ್ರಿಕ ಕರ್ತವ್ಯವನ್ನು ಪೂರೈಸಿದ ಕರ್ನಾ ಟಕ ರಾಜ್ಯದಜನತೆ ಇಂತಹ ಕ್ರಮವು ಕರ್ನಾಟಕದಲ್ಲಿ ಪುನಃ ಜಾರಿಗೊ ಳಿಸಲ್ಪಡದಂತೆಎಲ್ಲಾ ಜಾಗ್ರತಾಕ್ರಮವನ್ನು ವಹಿಸಲು ಮುಂದಾಗಬೇಕಾ ಗಿದೆ. ಈಗ ಜಮ್ಮು-ಕಾಶ್ಮೀರದಲ್ಲಿ ಜಿ. ಎಂ. ಷಾ ಮತ್ತವರ ಹಿಂಬಾಲ ಕರು ಮಾಡಿದ ಇದೇ ಪ್ರಯತ್ನವನ್ನು ವೀರಪ್ಪ ಮೊಯಿಲಿಯವರೂ ಅವರ ಹಿಂಬಾಲಕರೂ ಕರ್ನಾಟಕದಲ್ಲೂ ಮಾಡಿದ್ದರು, ಆದರೆ ಜನತೆ ಮತ್ತು ವಿಧಾನಸಭಾ ಸದಸ್ಯರಜಾಗ್ರತೆಯಿಂದಾಗಿ ಅವರು ವಿಫಲರಾದರು. ಜಮ್ಮು ಕಾಶ್ಮೀರದ ಸ್ಫೂರ್ತಿ ಪಡೆದು ಪುನಃ ಅವೇ ಕುತಂತ್ರಗಳನ್ನು ಅವರು ಇಲ್ಲಿ ಹೊಸದಾಗಿ ಆರಂಭ ಮಾಡಬಹುದು.

ಈ ಸಂದರ್ಭದಲ್ಲಿ ಬಿ.ಜೆ.ಪಿ.ಯ ತಂತ್ರಗಳು ಕಾಂಗ್ರೆಸ್ (ಐ)ಯ ಬಲೆಗೆ ಬೀಳುವಂತಾಗಿದೆ. ದಿನಬಿಟ್ಟು ದಿನ ಬಿ.ಜೆ.ಪಿ.ಯ ರಾಜ್ಯ ಮುಂದಾ ಳುಗಳು ತಾರಕಸ್ವರದಲ್ಲಿ ನಮ್ಮ ಬೆಂಬಲ ಶರ್ತಬದ್ಧ ಎಂದು ಬೊಬ್ಬಿಡುತ್ತಿ ದ್ದಾರೆ. ಅವರ ಪಕ್ಷವು ತಮ್ಮವರಲ್ಲಿ ಕೆಲವರನ್ನು ಮಂತ್ರಿಗಳಾಗಿ ಮಾಡ ಬೇಕೆಂಬ ಶರ್ತವನ್ನು ಈ ತನಕ ಒಡ್ಡಿದ್ದಿಲ್ಲ, ಈಗ ಅವರ ಈ ಬೇಡಿಕೆಯು ಅತಿ ಮುಖ್ಯವಾಗುತ್ತಿದೆ. ನಿಶ್ಯರ್ತ ಬೆಂಬಲ ಈಗ ಹೊರಟು ಹೋಗಿದೆ- ಇದೆಲ್ಲವೂ ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳನ್ನು ವಜಾಮಾಡಲು ನಿರ್ಧಾರಕ ಕ್ರಮಗಳನ್ನು ಇಂದಿರಾ ಗಾಂಧಿಯು ತೆಗೆದುಕೊಳ್ಳುತ್ತಿರುವಾಗ ನಡೆಯುತ್ತಿದೆ.

ಬಿ. ಜೆ. ಪಿ. ಯವರ ವಿಚ್ಛಿದ್ರಕಾರಿ ಹಿಂದೂ ಮತೀಯ ಪಾತ್ರವು ಇಂದಿರಾಗಾಂಧಿಗೆ ಅಲ್ಪಮತೀಯ ಪಂಗಡಗಳ ಮತ್ತು ಬಹುಮತೀಯರ ನಡುವೆ 'ಕೀಲು" ಹಾಕಲು ಅನುಕೂಲ ಮಾಡಿ ಕೊಡುವಂತಾಗಿದೆ ಮತ್ತು ಇತ್ತೀಚೆಗೆ ವಿಧಾನ ಸಭಾ ಸದಸ್ಯರ ಮೇಲೆ ನಡೆದ ಆಕ್ರಮಣ ಗಳು—ಒಂದು ಕೋಲಾರ ಜಿಲ್ಲೆಯ ವಿಜಯಪುರದಲ್ಲಿ ಜನತಾ ವಿಧಾನ ಸಭಾ ಸದಸ್ಯರ ಮೇಲೆ ಇನ್ನೊಂದು ಧಾರವಾಡ ಜಿಲ್ಲೆಯ ಬ್ಯಾಡಗಿಯಲ್ಲಿ ಕಾಂಗೆಸ್ (ಐ) ವಿಧಾನಸಭಾ ಸದಸ್ಯರ ಮೇಲೆ ನಡೆದ ಆಕ್ರಮಣಗಳು—ತೀವ್ರ ಚಿಂತೆಯನ್ನುಂಟು ಮಾಡುವಂತಾಗಿದೆ. ಚುನಾವಣಾ ಪೂರ್ವದ ಮುಂದಿನ ತಿಂಗಳುಗಳಲ್ಲಿ ಏನು ಸಂಭವಿಸಲಿದೆ ಎಂಬುದಕ್ಕೆ ಇದು ಮುನ್ಸೂಚನೆಯಾಗಿದೆ.

ಕರ್ನಾಟಕದ ಜನತೆ ಇಂತಹ ರಾಜಕೀಯ ಪುಢಾರಿಗಳ ಮತ್ತು ಪಕ್ಷಗಳ ಬಗ್ಗೆ ಎಚ್ಚರಿಕೆವಹಿಸಿ ಈ ತರದ ಬಲಾತ್ಕಾರ ಕ್ರಮಗಳು ನಡೆಯು ದಂತೆ ನೋಡಲು ಮುಂದಾಗಬೇಕಾಗಿದೆ. ಇವೆಲ್ಲದರಿಂದ, ದೇಶದಲ್ಲಿ ಎಡಪ್ರಜಾಪ್ರಭುತ, ಶಕ್ತಿಗಳ ವಿಶಾಲ ಪ್ರಜಾಪ್ರಭುತ್ವ ಹೋರಾಟ ಮಾತ್ರ ಸರ್ವಾಧಿಕಾರಿ ಶಕ್ತಿಗಳನ್ನು, ಜಾತೀಯ ಶಕ್ತಿಗಳನ್ನೂ ಸೋಲಿಸಿ ದೇಶದಲ್ಲಿ ಶಾಂತವಾತವರಣವನ್ನು ಮೂಡಿಸಲು ದೇಶದಲ್ಲಿರುವ ಪ್ರಕ್ಷುಬ್ಧ ವಾತಾವರಣವನ್ನು ತಿಳಿಗೊಳಿಸಲು ಸಾಧ್ಯ. ಇದಕ್ಕಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಕರೆಯ ಮೇರೆದ ಜುಲೈ 10 ರಿಂದ 17 ರವರೆಗೂ ದೇಶಾದ್ಯಂತ ಪಂಜಾಬ್ ದಿನಾಚರಣೆ ಮಾಡಲಾಗುತ್ತಿದೆ.

ಗಮನಿಸಿ

ಈ ಸಂಚಿಕೆಯ ಮೂರನೆ ಪುಟ ದಲ್ಲಿ ಪ್ರಕಟವಾಗಿರುವ "ಆರ್. ಎಸ್. ಎಸ್. ವಿಷ: ದೇಶದ ಸಮಗ್ರತೆಗೆ ಗಂಡಾಂತರ"ಲೇಖನ ದೊಂದಿಗೆ ಅದನ್ನು ಬರೆದ ಕಾ. ಪಿ. ರಾಮಚಂದ್ರ ರಾವ್ ಅವರ ಹೆಸರು ಕೈತಪ್ಪಿ ಹೋಗಿದೆ, ಅದಕ್ಕಾಗಿ ವಿಷಾದಿಸುತ್ತೇವೆ.

ತಿದ್ದುಪಡಿ

ಎರಡನೇ ಪುಟದ "ಸ್ಫೂರ್ತಿ ನೀಡಿದ ಸಮಾವೇಶಗಳು" ತಲೆಬರ ಹದ ಮೂರನೇ ಕಾಲಂನ "ಸಿ.ಪಿ.ಐ. (ಎಂ) ಪಕ್ಷದ ಪ್ರಯತ್ನದಿಂದಜುಲೈ 1ರಂದು ವಿರೋಧ ಪಕ್ಷಗಳ ಸಮಾ ವೇಶವೂ ಸೇರುತ್ತದೆ" ಎಂದಿರುವು ದನ್ನು "ಜುಲೈ 11ರಂದು" ಎಂದು ತಿದ್ದಿ ಕೊಳ್ಳಬೇಕೆಂದು ವಿನಂತಿ.

"ಸಕ್ಕರೆ ಕಾರ್ಮಿಕರ ಸಭೆ" ಶೀರ್ಷಿಕೆಯಡಿಯ ಸುದ್ದಿ ಪೂರ್ಣ ವಾಗಿ 7 ನೇ ಪುಟದಲ್ಲಿ ಪ್ರಕಟ ವಾಗಿದೆ. ಇದೇ ಸುದ್ದಿಯು ಸ್ವಲ್ಪ ಭಾಗ 6 ನೇ ಪುಟದಲ್ಲೂ ಅಚ್ಚಾ ಗಿರುವುದಕ್ಕೆ ವಿಷಾದಿಸುತ್ತೇವೆ.

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K V. Temple Street, Sultanpet. B-53. Phone: 24154
Editor: P. Ramachandra Rao Managing Editor: N. K. Upadhyaya